ಸಂಪುಟ: 11 ಸಂಚಿಕೆ: 227 ಪುಟಗಳು: 4+2 ಬೆಲೆ: ₹ 3.00 ಗುರುವಾರ ಅಕ್ಟೋಬರ್ 15, 2026 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 11 Issue : 227 Pages : 4+2 Rate : 3.00 Thursday, october 15, 2026 Gadag RNI No : KARKAN/2015/63412 E-mail: vijayasakshidaily@gmail.com Post Regn.No: GDG/72/2020-22

## ಗದಗ–ಬೆಟಗೇರಿ: ನೀರು ಪೂರೈಕೆ ವಿವರ

ವಿಜಯಸಾಕ್ಷಿ ಸುದ್ದಿ, ಗದಗ

ಗದಗ–ಬೆಟಗೇರಿ ಅವಳಿ ನಗರದ ವಿವಿಧ ಬಡಾವಣೆಗಳಿಗೆ ಅಕ್ಟೋಬರ್ 15ರಂದು ನೀರು ಪೂರೈಕೆ ಮಾಡಲಾಗುವುದು ಎಂದು ನಗರಸಭೆ ಪೌರಾಯುಕ್ತರು ತಿಳಿಸಿದ್ದಾರೆ. ತಾಂತ್ರಿಕ ಕಾರಣಗಳಿಂದ ನೀರು ಪೂರೈಕೆಯಲ್ಲಿ ಅಡಚಣೆ ಉಂಟಾದರೆ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕು ಎಂದು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ. ವಾರ್ಡ್ ನಂ. 22, 21 ಮತ್ತು 32ರ ವ್ಯಾಪ್ತಿಯಲ್ಲಿ 8ನೇ ನಂಬರ್ ಶಾಲೆ ಹತ್ತಿರದ ಪ್ರದೇಶ, ಗುಡಿಸಲ ಭಾಗ, ಪಾಟೀಲರ ಲೈನ್, ಹನುಮಂತ ಲೈನ್, ಪೊಲೀಸರ ಲೈನ್, ರಾಚೋಟೇಶ್ವರ ನಗರ, ವಿಜಯನಗರ ಶಾಲೆಯ ಕೆಳಭಾಗ ಹಾಗೂ ಹನುಮಾನ ನಗರ ಲೈನ್‌ಗಳಿಗೆ ನೀರು ಪೂರೈಕೆಯಾಗಲಿದೆ. ವಾರ್ಡ್ ನಂ. 33ರ ಜಾಕೀರ ಹುಸೇನ್ ಕಾಲೋನಿಯ ಏಳು ಭಾಗಗಳು, ಪಂಚಮುಖಿ ದೇವಸ್ಥಾನ, ಬೆಲ್ಲದ ಬಾಕಳೆ, ಕರಿಗೌಡ್ರ ಲೈನ್, ಸೋನಾಬಾಯಿ ಪವಾರ ಲೈನ್, ವೀರೇಶ್ವರ ನಗರ, ಸಹನಾ ಅಪಾರ್ಟ್‌ಮೆಂಟ್, ಬಸವ ಅಪಾರ್ಟ್‌ಮೆಂಟ್, ಕಲಾಲರ ಲೈನ್, ಅಬ್ಬಿಗೇರಿ ವಲ್ಲೂರ ಸರ್ ಲೈನ್ ಹಾಗೂ ಉಳಿದ ಭಾಗಗಳಿಗೆ ನೀರು ಪೂರೈಕೆಯಾಗಲಿದೆ. ವಾರ್ಡ್ ನಂ. 27ರ ಸ್ಟೇಡಿಯಂ, ಮುಲ್ಲಾ ಚಾಳ, ಕಾತರಕಿ ಚಾಳ, ಕುರಡಗಿ ದವಾಖಾನೆ ಲೈನ್ ಹಾಗೂ ವಾರ್ಡ್ ನಂ. 28ರ ಅಕ್ಕಿಯವರ ಲೈನ್, ನಾಗರಕಟ್ಟಿ ಲೈನ್, ದೇವಗಿರಿ ಸರ್ ಲೈನ್, ಕೊರ್ಲಹಳ್ಳಿ ಸರ್ ಲೈನ್, ಕಾಗದಗಾರ ಲೈನ್, ಗವಾಯಿಗಳ ಆಶ್ರಮದ ಮುಂದಿನ ಪ್ರದೇಶ, ಮಸಾರಿ ಮತ್ತು ಉಳಿದ ಭಾಗಗಳಿಗೂ ನೀರು ಪೂರೈಸಲಾಗುವುದು. ವಾರ್ಡ್ ನಂ. 6ರ ಹನುಮಂತ ದೇವರ ಗುಡಿ 2ನೇ ಲೈನ್, ರೇಣುಕಾಚಾರ್ಯ ಕಲ್ಯಾಣ ಮಂಟಪ, ರಂಗೀಲಾ ಸ್ಟೋರ್, ಬಾಳಿಕಾಯಿ ಹೊನ್ನಪ್ಪ ಪಾಟೀಲ ಲೈನ್ ಹಾಗೂ ಪಿ.ಪಿ. ಗುಡಿ ಲೈನ್, ವಾರ್ಡ್ ನಂ. 7ರ ಮೀಸ್ಕೀನ್ ಪ್ಲಾಟ್ ಲೈನ್, ವಾರ್ಡ್ ನಂ. 29ರ ಉರ್ದು ಶಾಲೆ, ಡಂಬಳ ಲೈನ್, ಚಂದಾವರಿ ಲೈನ್ ಮೇಲಿನ ಭಾಗಗಳಿಗೂ ನೀರು ಪೂರೈಕೆ ಮಾಡಲಾಗುವುದು. ವಾರ್ಡ್ ನಂ. 28ರ ಪಂಚಾಕ್ಷರಿ ನಗರದ 5ನೇ ಕ್ರಾಸ್ ಹಾಗೂ ವಾರ್ಡ್ ನಂ. 4ರ ಮಂಜುನಾಥ ನಗರ, ಟರ್ನಲ್ ಪೇಟೆ, 200 ಮನೆ, ಗಂಗಾಧರ ಲೈನ್, 35 ಮನೆ, ಬಿಎಸ್‌ಎನ್ ಕಚೇರಿ ಹಿಂಭಾಗ, ಮಂಜುನಾಥ ದೇವಸ್ಥಾನ ಮತ್ತು ಹುಲ್ಲಿಗೇಮ್ಮ ದೇವಿ ಗುಡಿ ಹತ್ತಿರದ ಪ್ರದೇಶಗಳಿಗೂ ನೀರು ಪೂರೈಕೆಯಾಗಲಿದೆ. ಇದರೊಂದಿಗೆ ವಾರ್ಡ್ ನಂ. 30, 34 ಮತ್ತು 35ರ ಹುಡ್ಕೊ ಕಾಲೋನಿ ಹಾಗೂ ವಾರ್ಡ್ ನಂ. 26ರ ಹಳೆ ಬಸ್ ನಿಲ್ದಾಣದ ಲೈನ್, ಬೇವಿನಕಟ್ಟಿ ಭಾಗ–1 ಮತ್ತು ಭಾಗ–2, ಜನತಾ ಕಿರಾಣಿ, ಭೂಸ್ತರ ಲೈನ್, ಸಂಗಮ ಬಜಾರ್ ಲೈನ್ ಸೇರಿದಂತೆ ಉಳಿದ ಭಾಗಗಳಿಗೂ ನೀರು ಪೂರೈಸಲಾಗುವುದು ಎಂದು ನಗರಸಭೆ ಪ್ರಕಟಣೆ ತಿಳಿಸಿದೆ.

## ಆಕ್ಷೇಪಣೆಗೆ ಅವಕಾಶ

ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲೆಯಲ್ಲಿ ಹಲವು ವರ್ಷಗಳಿಂದ ಕಾರ್ಯಾಚರಣೆ ಸ್ಥಗಿತಗೊಳಿಸಿರುವ 9 ಸಹಕಾರ ಸಂಘಗಳನ್ನು ಸಮಾಪನೆಗೊಳಿಸಲು ಸಹಕಾರ ಸಂಘಗಳ ಉಪನಿಬಂಧಕರ ಕಚೇರಿ ಮುಂದಾಗಿದೆ. ಈ ಕುರಿತು ಸಂಬಂಧಪಟ್ಟ ಸಂಘಗಳ ಪದಾಧಿಕಾರಿಗಳು ಹಾಗೂ ಸದಸ್ಯರು ಸಾರ್ವಜನಿಕ ಪ್ರಕಟಣೆ ಹೊರಡಿಸಿದ 7 ದಿನಗಳೊಳಗೆ ಆಕ್ಷೇಪಣೆ ಸಲ್ಲಿಸಬಹುದು ಎಂದು ಸಹಕಾರ ಸಂಘಗಳ ಉಪನಿಬಂಧಕರು ತಿಳಿಸಿದ್ದಾರೆ. ಸಮಾಪನೆಗೆ ಪ್ರಸ್ತಾಪಿಸಿರುವ ಸಂಘಗಳಲ್ಲಿ ರೋಣದ ಶ್ರೀ ಭೀಮಾಂಬಿಕಾ ಮಹಿಳಾ ಕಂಜ್ಯೂಮರ್ಸ್ ಕೋ–ಆಪರೇಟಿವ್ ಸೊಸೈಟಿ ನಿ., ಹೊಳೆಹಡಗಲಿಯ ಹಾಲು ಉತ್ಪಾದಕರ ಸಹಕಾರ ಸಂಘ ನಿ., ರೋಣ ತಾಲೂಕಾ ಕೋಳಿ ಸಾಕಾಣಿಕೆದಾರರ ಸಹಕಾರ ಸಂಘ ನಿ., ಹರ್ತಿಯ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘ ನಿ., ಶಿಗ್ಲಿಯ ಪರಿಶಿಷ್ಟ ಜಾತಿ ಜನರ ವಿದ್ಯುತ್ ಮಗ್ಗಗಳ ನೇಕಾರರ ಉತ್ಪಾದಕರ ಮತ್ತು ಮಾರಾಟ ಹಾಗೂ ವಿವಿಧೋದ್ದೇಶಗಳ ಸಹಕಾರ ಸಂಘ ನಿ. ಸೇರಿವೆ. ಅದೇ ರೀತಿ ಗದಗದ ದಿ. ಗದಗ ತಾಲೂಕ ಖಾದಿ ಗ್ರಾಮೋದ್ಯೋಗ ಸಹಕಾರ ಸಂಘ ನಿ., ಶ್ರೀ ಅನ್ನಪೂರ್ಣೇಶ್ವರಿ ಗೃಹ ನಿರ್ಮಾಣ ಸಹಕಾರ ಸಂಘ ನಿ., ಕಾಪ್ಟೋ ವಿವಿಧೋದ್ದೇಶಗಳ ಸಹಕಾರ ಸಂಘ ನಿ. ಹಾಗೂ ಡಿಸ್ಟಿಕ್ಟ್ ಪ್ರಿಂಟಿಂಗ್, ಪಬ್ಲಿಷಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ. ಸಮಾಪನೆಗೆ ಪ್ರಸ್ತಾಪಿಸಲಾದ ಇತರ ಸಂಘಗಳಾಗಿವೆ. ಆಡಳಿತ ಮಂಡಳಿ ಮತ್ತು ಸಾಮಾನ್ಯ ಸದಸ್ಯರು ಸಂಘಗಳ ಕಾರ್ಯಚಟುವಟಿಕೆಗಳಲ್ಲಿ ಆಸಕ್ತಿ ತೋರಿಸದಿರುವುದು, ಅಥಾವೆ ಪತ್ರಿಕೆಗಳು ಹಾಗೂ ಆಡಳಿತ ಮಂಡಳಿ ಸದಸ್ಯರ ವಿಳಾಸಗಳು ಲಭ್ಯವಿಲ್ಲದಿರುವುದು ಕಂಡುಬಂದಿದೆ. ಪ್ರಕಟಣೆ ಹೊರಡಿಸಿದ 7 ದಿನಗಳೊಳಗೆ ಸಂಬಂಧಪಟ್ಟವರು ಹಾಜರಾಗದಿದ್ದರೆ ಸಂಘಗಳನ್ನು ಸಮಾಪನೆಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

### ಪಶ್ಚಿಮ ಪದವೀಧರ ಕ್ಷೇತ್ರದ ಮತದಾನಕ್ಕೆ ಸಿದ್ಧತೆ | ಅಧಿಕಾರಿಗಳಿಗೆ ಡಿಸಿ ಸಿ.ಎನ್. ಶ್ರೀಧರ್ ಕಟ್ಟುನಿಟ್ಟಿನ ಸೂಚನೆ

# ಮತಪತ್ರದ ಚುನಾವಣೆ, ಎಚ್ಚರ ತಪ್ಪಿದರೆ ಎಡವಟ್ಟು



ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಪಶ್ಚಿಮ ಪದವೀಧರ ಕ್ಷೇತ್ರದ ದ್ವೈವಾರ್ಷಿಕ ಚುನಾವಣೆಗೆ ಜಿಲ್ಲಾಡಳಿತ ಸಿದ್ಧತೆ ಚುರುಕುಗೊಳಿಸಿದ್ದು, ಮತದಾನ ಪ್ರಕ್ರಿಯೆಯಲ್ಲಿ ಸಣ್ಣ ಲೋಪಕ್ಕೂ ಅವಕಾಶ ನೀಡದಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಈ ಬಾರಿ ಇವಿಎಂ ಬದಲಿಗೆ ಮತಪತ್ರ ಮತ್ತು ಮತಪೆಟ್ಟಿಗೆಗಳ ಮೂಲಕ ಚುನಾವಣೆ ನಡೆಯಲಿರುವುದರಿಂದ, ಪ್ರತಿಯೊಂದು ಹಂತದಲ್ಲೂ ಎಚ್ಚರಿಕೆ, ನಿಖರತೆ ಮತ್ತು ಪಾರದರ್ಶಕತೆ ಕಾಯ್ದುಕೊಳ್ಳಬೇಕು ಎಂದು ಅವರು ನಿರ್ದೇಶನ ನೀಡಿದ್ದಾರೆ.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಬುಧವಾರ ನಡೆದ ಚುನಾವಣಾ ಪ್ರಿಸೈಡಿಂಗ್ ಹಾಗೂ ಪೋಲಿಂಗ್ ಅಧಿಕಾರಿಗಳ ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಚುನಾವಣಾ ಕರ್ತವ್ಯಕ್ಕೆ ನಿಯೋಜನೆಗೊಂಡಿರುವ ಪ್ರತಿಯೊಬ್ಬ ಅಧಿಕಾರಿಯೂ ತನ್ನ ಜವಾಬ್ದಾರಿಯನ್ನು ಸಂಪೂರ್ಣವಾಗಿ ಅರಿತುಕೊಳ್ಳಬೇಕು. ತರಬೇತಿಯಲ್ಲಿ ತಿಳಿಸುವ ಪ್ರತಿಯೊಂದು ಅಂಶವನ್ನೂ ಗಂಭೀರವಾಗಿ ಪರಿಗಣಿಸಿ, ಮತದಾನದ ದಾಖಲೆಗಳು, ಅಂಕಿ–ಅಂಶಗಳು ಹಾಗೂ ವರದಿಗಳನ್ನು ಸಿದ್ಧಪಡಿಸುವಾಗ ಯಾವುದೇ ಗೊಂದಲಕ್ಕೆ ಅವಕಾಶ ನೀಡಬಾರದು. ಸಮಯಪಾಲನೆಗೆ ಆದ್ಯತೆ ನೀಡಿ, ನಿಗದಿತ ಸಮಯದಲ್ಲಿ ಅಗತ್ಯ ಮಾಹಿತಿಯನ್ನು ಒದಗಿಸಬೇಕು ಎಂದು ಸೂಚಿಸಿದರು.

**ಮತಪತ್ರದ ನಿರ್ವಹಣೆಯಲ್ಲಿ ವಿಶೇಷ ಎಚ್ಚರಿಕೆ**

ಈ ಬಾರಿಯ ಚುನಾವಣೆಯಲ್ಲಿ ವಿದ್ಯುನ್ಮಾನ ಮತಯಂತ್ರಗಳ ಬದಲಿಗೆ ಮತಪತ್ರ ಹಾಗೂ ಮತಪೆಟ್ಟಿಗೆ ಬಳಸಲಾಗುತ್ತಿದೆ. ಹೀಗಾಗಿ ಮತದಾನದ ಪ್ರಕ್ರಿಯೆ, ಮತಪತ್ರಗಳ ನಿರ್ವಹಣೆ, ಕಾನೂನುಬದ್ಧ ದಾಖಲೆಗಳು ಹಾಗೂ ಚುನಾವಣಾ ಸಾಮಗ್ರಿಗಳ ಬಳಕೆಯ ಬಗ್ಗೆ ಸಿಬ್ಬಂದಿ ಸಂಪೂರ್ಣ ತಿಳಿವಳಿಕೆ ಹೊಂದಿರಬೇಕು ಎಂದು ಮಾಸ್ಟರ್ ಟ್ರೈನರ್ ಬಿ.ಜಿ. ಗಿರಿತಿಮ್ಮಣ್ಣವರ ತಿಳಿಸಿದರು.

**1+3 ಮಾದರಿಯಲ್ಲಿ ಕರ್ತವ್ಯ ನಿರ್ವಹಣೆ**

ಪ್ರತಿ ಮತಗಟ್ಟೆಯಲ್ಲಿ ಒಬ್ಬ ಪ್ರಿಸೈಡಿಂಗ್ ಅಧಿಕಾರಿ ಮತ್ತು ಮೂವರು ಪೋಲಿಂಗ್ ಅಧಿಕಾರಿಗಳನ್ನೊಳಗೊಂಡ 1+3 ಮಾದರಿಯ ತಂಡ ಕಾರ್ಯನಿರ್ವಹಿಸಲಿದೆ. ತಂಡದ ಪ್ರತಿಯೊಬ್ಬ ಸದಸ್ಯರೂ ತಮ್ಮ ಕರ್ತವ್ಯವನ್ನು ಅರಿತು ಪರಸ್ಪರ ಸಮನ್ವಯದಿಂದ ಕೆಲಸ ಮಾಡಬೇಕು. ಮತದಾನದ ದಿನ ನಿಗದಿತ ಸಮಯಕ್ಕಿಂತ ಮುಂಚಿತವಾಗಿ ಮತಗಟ್ಟೆ ತಲುಪಿ, ಅಗತ್ಯ ಸಿದ್ಧತೆಗಳನ್ನು ಪೂರ್ಣಗೊಳಿಸಬೇಕು ಎಂದು ತರಬೇತಿಯಲ್ಲಿ ತಿಳಿಸಲಾಯಿತು.

ಮತದಾರರ ಗುರುತು ಪರಿಶೀಲನೆ, ಮತದಾನದ ದಾಖಲೆಗಳ ನಿರ್ವಹಣೆ, ಮತಪತ್ರ ಹಾಗೂ ಮತಪೆಟ್ಟಿಗೆಯ ಬಳಕೆ ಸೇರಿದಂತೆ ಪ್ರತಿಯೊಂದು ಹಂತದಲ್ಲೂ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಮತಗಟ್ಟೆಯ ಸುತ್ತಮುತ್ತ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲು ಸಿಬ್ಬಂದಿ ಜಾಗರೂಕರಾಗಿರಬೇಕು ಎಂದು ಸೂಚಿಸಲಾಯಿತು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ. ದುರಗೇಶ್ ಕೆ.ಆರ್., ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾಧಿಕಾರಿ ಎ.ಎ. ಕಂಬಾಳಿಮಠ, ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಸಿ.ಆರ್. ಮುಂಡರಗಿ, ಉಪವಿಭಾಗಾಧಿಕಾರಿ ಗಂಗಪ್ಪ ಎಂ., ಆಹಾರ ಇಲಾಖೆಯ ಉಪ ನಿರ್ದೇಶಕ ಎಸ್.ಡಿ. ಪಾಟೀಲ್, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸನಗೌಡ ಕೊಟೂರು, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕಿ ಡಾ. ನಂದಾ ಹಣಬರಹಟ್ಟಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

> ಚುನಾವಣಾ ಪ್ರಕ್ರಿಯೆಯನ್ನು ಅತ್ಯಂತ ಜವಾಬ್ದಾರಿಯುತವಾಗಿ, ಪಾರದರ್ಶಕವಾಗಿ ಮತ್ತು ಯಾವುದೇ ಲೋಪದೋಷಗಳಿಲ್ಲದೆ ನಿರ್ವಹಿಸಬೇಕು. ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಎಚ್ಚರಿಕೆಯಿಂದ ನಿರ್ವಹಿಸಿ, ಚುನಾವಣೆಯನ್ನು ಯಶಸ್ವಿಗೊಳಿಸಬೇಕು.
>
> – ಸಿ.ಎನ್. ಶ್ರೀಧರ್ ಜಿಲ್ಲಾಧಿಕಾರಿ, ಗದಗ

## ಶಾರ್ಟ್ ಸರ್ಕ್ಯೂಟ್: 85 ಲಕ್ಷ ರೂ. ಮೌಲ್ಯದ ಹತ್ತಿ ಭಸ್ಮ



ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಹುಬ್ಬಳ್ಳಿ ರಸ್ತೆಯಲ್ಲಿರುವ ಪದ್ಮಾವತಿ ಜಿನ್ನಿಂಗ್ ಫ್ಯಾಕ್ಟರಿಯಲ್ಲಿ ಬುಧವಾರ ನಸುಕಿನ ಜಾವ ಸಂಭವಿಸಿದ ಅಗ್ನಿ ದುರಂತದಲ್ಲಿ ಸುಮಾರು 85 ಲಕ್ಷ ರೂ. ಮೌಲ್ಯದ ಹತ್ತಿ ಸುಟ್ಟು ಭಸ್ಮವಾಗಿದೆ.

ಪದ್ಮ ಶಾಂತಿಲಾಲ್ ಮುಥಾ ಅವರಿಗೆ ಸೇರಿದ ಫ್ಯಾಕ್ಟರಿಯಲ್ಲಿ ಬೆಳಗಿನ ಜಾವ 4.30ರ ಸುಮಾರಿಗೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂಡಿದೆ ಎನ್ನಲಾಗಿದೆ. ಬೆಂಕಿಯ ಕೆನ್ನಾಲಿಗೆಗೆ 285ಕ್ಕೂ ಅಧಿಕ ಹತ್ತಿ ಬೇಲ್‌ಗಳು ಹಾಗೂ ಒಂದು ಕ್ವಿಂಟಲ್‌ಗೂ ಅಧಿಕ ಬಿಡಿ ಹತ್ತಿ ಸುಟ್ಟುಹೋಗಿದೆ ಎಂದು ತಿಳಿದುಬಂದಿದೆ.

ಘಟನೆ ಸಂಭವಿಸಿದ ಸಂದರ್ಭದಲ್ಲಿ ಫ್ಯಾಕ್ಟರಿಯಲ್ಲಿ ಕಾರ್ಮಿಕರು ಇರದ ಕಾರಣ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಮಾಹಿತಿ ತಿಳಿಯುತ್ತಿದ್ದಂತೆ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸುವ ಕಾರ್ಯಾಚರಣೆ ನಡೆಸಿದರು. ಹತ್ತಿ ಸಂಗ್ರಹಕ್ಕೆ ಬೆಂಕಿ ಹೊತ್ತಿಕೊಂಡಿದ್ದರಿಂದ ಅದನ್ನು ನಿಯಂತ್ರಿಸಲು ಸಿಬ್ಬಂದಿ ಹರಸಾಹಸಪಟ್ಟರು.

ಅಗ್ನಿ ದುರಂತದಿಂದ ಸುಮಾರು 85 ಲಕ್ಷ ರೂ.ಗೂ ಅಧಿಕ ನಷ್ಟವಾಗಿರುವ ಅಂದಾಜಿದೆ. ಆದರೆ, ಅಧಿಕೃತ ಪರಿಶೀಲನೆಯ ಬಳಿಕವಷ್ಟೇ ನಿಖರ ಹಾನಿಯ ಪ್ರಮಾಣ ತಿಳಿಯಬೇಕಿದೆ. ಈ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

### ಭೂ ದಾಖಲೆಗಳ ಕೆಲಸಕ್ಕೆ ಬ್ರೇಕ್, ಶಿರಹಟ್ಟಿ-ಲಕ್ಷ್ಮೇಶ್ವರದಲ್ಲೇ 1,214 ಅರ್ಜಿಗಳು ಬಾಕಿ!

# ಜಿಲ್ಲೆಯ 7 ತಾಲೂಕುಗಳಿಗೆ ಒಬ್ಬರೇ ಅಧಿಕಾರಿ

ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಸಾರ್ವಜನಿಕರು ಸರಕಾರಿ ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸಿ, ಸಕಾಲದಲ್ಲಿ ಸೇವೆ ಒದಗಿಸಲು ಸರಕಾರ ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿದೆ. ಆದರೆ ಅಧಿಕಾರಿಗಳ ಕೊರತೆ ಹಾಗೂ ವರ್ಗಾವಣೆ ಪ್ರಕ್ರಿಯೆಯಿಂದಾಗಿ ಇಲಾಖೆಗಳ ಕಾರ್ಯನಿರ್ವಹಣೆಗೆ ತೊಡಕಾಗುತ್ತಿದ್ದು, ಗದಗ ಜಿಲ್ಲೆಯ ಏಳು ತಾಲೂಕುಗಳ ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಜವಾಬ್ದಾರಿಯನ್ನು ಒಬ್ಬರೇ ಅಧಿಕಾರಿ ನಿರ್ವಹಿಸುತ್ತಿರುವುದು ಆಡಳಿತದ ಕಾರ್ಯಕ್ಷಮತೆ ಕುರಿತು ಪ್ರಶ್ನೆ ಮೂಡಿಸಿದೆ.




ಗದಗ, ಶಿರಹಟ್ಟಿ, ಮುಂಡರಗಿ, ಲಕ್ಷ್ಮೇಶ್ವರ, ರೋಣ, ನರಗುಂದ ಹಾಗೂ ಗಜೇಂದ್ರಗಡ ತಾಲೂಕುಗಳಿಗೆ ಕಳೆದ ಒಂದು ತಿಂಗಳಿನಿಂದ ಒಬ್ಬರೇ ಸಹಾಯಕ ನಿರ್ದೇಶಕರು ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರತಿದಿನ ಒಂದೊಂದು ತಾಲೂಕಿಗೆ ಭೇಟಿ ನೀಡಿ ಕೆಲಸ ನಿರ್ವಹಿಸುತ್ತಿದ್ದು, ರಜೆ ಬಂದ ದಿನಗಳಲ್ಲಿ ಮರುದಿನ ಎರಡು ತಾಲೂಕುಗಳಿಗೆ ಭೇಟಿ ನೀಡಬೇಕಾದ ಪರಿಸ್ಥಿತಿಯೂ ಇದೆ.

**ಶಿರಹಟ್ಟಿ–ಲಕ್ಷ್ಮೇಶ್ವರದಲ್ಲಿ ನೂರಾರು ಅರ್ಜಿಗಳು ಬಾಕಿ**

ಭೂ ದಾಖಲೆಗಳ ಇಲಾಖೆಯ ಅಂಕಿ–ಅಂಶಗಳ ಪ್ರಕಾರ, ಶಿರಹಟ್ಟಿ ತಾಲೂಕಿನಲ್ಲಿ 11ಇ–ನಕ್ಷೆಗೆ ಸಂಬಂಧಿಸಿದ 209 ಅರ್ಜಿಗಳು ಬಾಕಿ ಇದ್ದರೆ, ಲಕ್ಷ್ಮೇಶ್ವರದಲ್ಲಿ 275 ಅರ್ಜಿಗಳು ಬಾಕಿ ಇವೆ. ತತ್ಕಾಲ್ ಪೋಡಿ ವಿಭಾಗದಲ್ಲಿ ಶಿರಹಟ್ಟಿಯಲ್ಲಿ 109 ಹಾಗೂ ಲಕ್ಷ್ಮೇಶ್ವರದಲ್ಲಿ 153 ಅರ್ಜಿಗಳು ವಿಲೇವಾರಿಗೆ ಕಾಯುತ್ತಿವೆ.

ಹದ್ದುಬಸ್ತು ಕಾರ್ಯಕ್ಕೆ ಸಂಬಂಧಿಸಿದಂತೆ ಶಿರಹಟ್ಟಿ ತಾಲೂಕಿನಲ್ಲಿ 150 ಹಾಗೂ ಲಕ್ಷ್ಮೇಶ್ವರ ತಾಲೂಕಿನಲ್ಲಿ 327 ಅರ್ಜಿಗಳು ಬಾಕಿ ಉಳಿದಿವೆ. ಭೂ ದಾಖಲೆಗಳ ಕೆಲಸಗಳಿಗಾಗಿ ಕಚೇರಿಗಳಿಗೆ ಭೇಟಿ ನೀಡುವ ಸಾರ್ವಜನಿಕರು ಅರ್ಜಿಗಳ ವಿಲೇವಾರಿಗೆ ಕಾಯಬೇಕಾದ ಪರಿಸ್ಥಿತಿ ಎದುರಾಗಿದೆ.

**23 ಸರ್ವೆಯರ್ ಹುದ್ದೆಗಳಲ್ಲಿ 8 ಖಾಲಿ**

ಶಿರಹಟ್ಟಿ ಮತ್ತು ಲಕ್ಷ್ಮೇಶ್ವರ ತಾಲೂಕುಗಳ ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಗಳಲ್ಲಿ ಒಟ್ಟು 23 ಸರ್ವೆಯರ್ ಹುದ್ದೆಗಳು ಮಂಜೂರಾಗಿದ್ದು, 15 ಮಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಉಳಿದ 8 ಹುದ್ದೆಗಳು ಖಾಲಿ ಇವೆ. ಇದರ ಜತೆಗೆ 14 ಲೈಸನ್ಸ್‌ಧಾರಕ ಸರ್ವೆಯರ್‌ಗಳಿದ್ದಾರೆ.

ಖಾಯಂ ಸಹಾಯಕ ನಿರ್ದೇಶಕರಿಲ್ಲದಿರುವುದು ಹಾಗೂ ಸಿಬ್ಬಂದಿ ಕೊರತೆಯಿಂದ ಇಲಾಖೆಯ ಕೆಲಸಗಳ ಮೇಲೆ ಪರಿಣಾಮ ಬೀರುತ್ತಿದೆ ಎಂಬ ಆತಂಕ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗಿದೆ. ಫೀಲ್ಡ್ ವರ್ಕ್ ನೆಪದಲ್ಲಿ ಕೆಲವು ಪ್ರಕರಣಗಳ ವಿಲೇವಾರಿ ವಿಳಂಬವಾಗುತ್ತಿದೆ ಎಂಬ ದೂರುಗಳೂ ಕೇಳಿಬರುತ್ತಿವೆ.

ಜಿಲ್ಲೆಯ ಎಲ್ಲ ತಾಲೂಕುಗಳ ಜವಾಬ್ದಾರಿಯನ್ನು ಒಬ್ಬರೇ ಅಧಿಕಾರಿ ನಿಭಾಯಿಸಬೇಕಾದ ಪರಿಸ್ಥಿತಿಯಲ್ಲಿ ಸಾರ್ವಜನಿಕರಿಗೆ ತ್ವರಿತ ಸೇವೆ ಒದಗಿಸುವುದು ಸವಾಲಾಗಿದೆ. ಸಂಬಂಧಿಸಿದ ಜಿಲ್ಲಾ ಮಟ್ಟದ ಅಧಿಕಾರಿಗಳು ಖಾಯಂ ಸಹಾಯಕ ನಿರ್ದೇಶಕರನ್ನು ನೇಮಿಸುವುದರ ಜತೆಗೆ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿ, ಬಾಕಿ ಅರ್ಜಿಗಳ ವಿಲೇವಾರಿಗೆ ಕ್ರಮ ಕೈಗೊಳ್ಳಬೇಕೆಂಬುದು ಸಾರ್ವಜನಿಕರ ಒತ್ತಾಯವಾಗಿದೆ.

**ಶೀಘ್ರ ಸಮಸ್ಯೆ ಪರಿಹಾರ: ರುದ್ರಣ್ಣಗೌಡ**

ಈ ಕುರಿತು ಪ್ರತಿಕ್ರಿಯಿಸಿದ ಜಿಲ್ಲಾ ಭೂ ದಾಖಲೆಗಳ ಉಪನಿರ್ದೇಶಕ ರುದ್ರಣ್ಣಗೌಡ ಜಿ.ಜೆ., ಇಲಾಖೆಯಲ್ಲಿ ಬಡ್ತಿ ಹಾಗೂ ವರ್ಗಾವಣೆ ಪ್ರಕ್ರಿಯೆ ನಡೆಯುತ್ತಿದೆ. ಮೇಲಧಿಕಾರಿಗಳು ಶೀಘ್ರದಲ್ಲಿಯೇ ಸಮಸ್ಯೆಯನ್ನು ಸರಿಪಡಿಸಲಿದ್ದಾರೆ ಎಂದು ತಿಳಿಸಿದರು.

## ಅಸುಂಡಿ ಗ್ರಾಮದ ಮಂಗಳಾ ರಡ್ಡೇರಗೆ ಪಿಎಚ್.ಡಿ ಪದವಿ



ವಿಜಯಸಾಕ್ಷಿ ಸುದ್ದಿ, ಗದಗ

ತಾಲೂಕಿನ ಅಸುಂಡಿ ಗ್ರಾಮದ ಸಂಶೋಧನಾ ವಿದ್ಯಾರ್ಥಿನಿ ಮಂಗಳಾ ವಿ. ರಡ್ಡೇರ ಅವರು ಇಂಗ್ಲಿಷ್ ವಿಷಯದಲ್ಲಿ ಪಿಎಚ್.ಡಿ ಪದವಿ ಪಡೆದಿದ್ದಾರೆ.

ರಾಜಸ್ಥಾನದ ಜೈಪುರದಲ್ಲಿರುವ ಡಾ. ಕೆ.ಎನ್. ಮೋದಿ ವಿಶ್ವವಿದ್ಯಾ ಲಯವು ಅವರಿಗೆ ಡಾಕ್ಟರ್ ಆಫ್ ಫಿಲಾಸಫಿ ಪದವಿ ಪ್ರದಾನ ಮಾಡಿದೆ.

ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ. ಸಿರಾಜ್ ಫಾತಿಮಾ ಅವರ ಮಾರ್ಗದರ್ಶನದಲ್ಲಿ ಈ ಸಂಶೋಧನೆ ಪೂರ್ಣಗೊಳಿಸಿದ್ದಾರೆ.

ಮಂಗಳಾ ರಡ್ಡೇರ ಅವರ ಶೈಕ್ಷಣಿಕ ಸಾಧನೆಗೆ ಅಸುಂಡಿ ಗ್ರಾಮದಲ್ಲಿ ಮೆಚ್ಚುಗೆ ವ್ಯಕ್ತವಾಗಿದ್ದು, ಕುಟುಂಬದವರು, ಬಂಧುಗಳು ಹಾಗೂ ಹಿತೈಷಿಗಳು ಅಭಿನಂದನೆ ಸಲ್ಲಿಸಿದ್ದಾರೆ.

## ಸಂಕನೂರ ಪರ ಸಿ.ಸಿ. ಪಾಟೀಲ ಪ್ರಚಾರ



ವಿಜಯಸಾಕ್ಷಿ ಸುದ್ದಿ, ಗದಗ

ಪಶ್ಚಿಮ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ವಿ. ಸಂಕನೂರ ಅವರ ಪರ ಶಾಸಕ ಹಾಗೂ ಮಾಜಿ ಸಚಿವ ಸಿ.ಸಿ. ಪಾಟೀಲ ಅವರು ನರಗುಂದ ಮತಕ್ಷೇತ್ರದ ವ್ಯಾಪ್ತಿಯ ಬೆಳವಣಿಕಿ ಗ್ರಾಮದಲ್ಲಿ ಪ್ರಚಾರ ನಡೆಸಿದರು. ಈ ಸಂದರ್ಭದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷರು, ಪಕ್ಷದ ಪದಾಧಿಕಾರಿಗಳು, ಮುಖಂಡರು, ಕಾರ್ಯಕರ್ತರು ಹಾಗೂ ಪಕ್ಷದ ಹಿತೈಷಿಗಳು ಉಪಸ್ಥಿತರಿದ್ದರು.

### ಮೂರು ದಿನಗಳಲ್ಲೇ ಪ್ರಕರಣ ಭೇದಿಸಿದ ಗದಗ ಗ್ರಾಮೀಣ ಪೊಲೀಸರು

# ಲಕ್ಕುಂಡಿ ಕೊಲೆ ಕೇಸ್‌ಗೆ ಟ್ವಿಸ್ಟ್, ತಂದೆ–ಮಗ ಅರೆಸ್ಟ್

ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯ ಲಕ್ಕುಂಡಿ ಗ್ರಾಮದ ರೈತ ಬಸವಣ್ಣಪ್ಪ ಮಾಡಲಗೇರಿ (65) ಕೊಲೆ ಪ್ರಕರಣಕ್ಕೆ ಮಹತ್ವದ ತಿರುವು ಸಿಕ್ಕಿದ್ದು, ಕೊಲೆಯ ಆರೋಪದ ಮೇಲೆ ಮೃತರ ಸಹೋದರನ ಮಗ ಈರಪ್ಪ ಮಾಡಲಗೇರಿ (60) ಹಾಗೂ ಆತನ ಪುತ್ರ ಪ್ರಶಾಂತ ಮಾಡಲಗೇರಿ (22) ಅವರನ್ನು ಗದಗ ಗ್ರಾಮೀಣ ಪೊಲೀಸರು ಬಂಧಿಸಿದ್ದಾರೆ.

ಬುಧವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಎಸ್ಪಿ ಮಿಥುನ್ ಎಚ್.ಎನ್. ಪ್ರಕರಣದ ವಿವರಗಳನ್ನು ತಿಳಿಸಿದರು. ಅಕ್ಟೋಬರ್ 9ರಂದು ರಾತ್ರಿ 7.30ರಿಂದ 10 ಗಂಟೆಯ ನಡುವಿನ ಅವಧಿಯಲ್ಲಿ ಲಕ್ಕುಂಡಿ–ಕದಾಂಪುರ ರಸ್ತೆ ಸಮೀಪ ಬಸವಣ್ಣಪ್ಪ ಅವರ ಕುತ್ತಿಗೆ ಮತ್ತು ತಲೆಗೆ ಆಯುಧದಿಂದ ಹಲ್ಲೆ ನಡೆಸಿ ಕೊಲೆ ಮಾಡಲಾಗಿತ್ತು. ಮೃತರ ಪುತ್ರ ಚಂದನಕುಮಾರ ಮಾಡಲಗೇರಿ ನೀಡಿದ ದೂರಿನ ಮೇರೆಗೆ ಗದಗ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿತ್ತು.

ನಾಲ್ಕು ಎಕರೆ ಜಮೀನಿನ ವಿವಾದವೇ ಕೊಲೆಗೆ ಕಾರಣವಾಗಿರಬಹುದು ಎಂಬುದು ಪ್ರಾಥಮಿಕ ತನಿಖೆಯಲ್ಲಿ ತಿಳಿದು ಬಂದಿದೆ.



ಈ ಜಮೀನಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಪ್ರಕರಣ ನಡೆದಿದ್ದು, ಇತ್ತೀಚೆಗೆ ಜಮೀನು ಬಸವಣ್ಣಪ್ಪ ಅವರ ಹೆಸರಿಗೆ ಸೇರಬೇಕೆಂದು ಆದೇಶವಾಗಿತ್ತು ಎನ್ನಲಾಗಿದೆ. ಇದರಿಂದ ಆರೋಪಿತರು ಅಸಮಾಧಾನಗೊಂಡಿದ್ದರು ಎಂಬ ಮಾಹಿತಿ ತನಿಖೆಯಲ್ಲಿ ಹೊರಬಂದಿದೆ.

ಇದಲ್ಲದೆ, ಜಂತ್ಲಿ–ಶಿರೂರು ರಸ್ತೆಯಲ್ಲಿರುವ 14 ಎಕರೆ ಜಮೀನಿನ ವಿಚಾರವೂ ವಿವಾದಕ್ಕೆ ಕಾರಣವಾಗಿತ್ತು. ಆಸ್ತಿಯಲ್ಲಿ ಪಾಲು ಸಿಗದಿರಲು ಬಸವಣ್ಣಪ್ಪ ಅವರೇ ಕಾರಣ ಎಂದು ಆರೋಪಿತರು ಭಾವಿಸಿದ್ದರು ಎನ್ನಲಾಗಿದೆ.

ಈರಪ್ಪನ ಪ್ರಚೋದನೆಯ ಮೇರೆಗೆ ಪ್ರಶಾಂತ ಕುಡಗೋಲಿನಿಂದ ಬಸವಣ್ಣಪ್ಪ ಅವರ ಕುತ್ತಿಗೆ ಮತ್ತು ತಲೆಗೆ ಹಲ್ಲೆ ನಡೆಸಿ, ಬಳಿಕ ಕಲ್ಲಿನಿಂದಲೂ ತಲೆಗೆ ಹೊಡೆದು ಕೊಲೆ ಮಾಡಿದ್ದಾನೆ ಎಂಬುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ ಎಂದು ಎಸ್ಪಿ ತಿಳಿಸಿದರು.

**ಮೂರು ದಿನದಲ್ಲೇ ಆರೋಪಿಗಳ ಪತ್ತೆ**

ಡಿಎಸ್ಪಿ ಮುರ್ತುಜಾ ಖಾದ್ರಿ ಅವರ ಮಾರ್ಗದರ್ಶನದಲ್ಲಿ ಗ್ರಾಮೀಣ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಸಿದ್ದರಾಮೇಶ್ವರ ಗಡೇದ ನೇತೃತ್ವದಲ್ಲಿ ವಿಶೇಷ ತಂಡ ರಚಿಸಲಾಗಿತ್ತು. ತಾಂತ್ರಿಕ ಮಾಹಿತಿ ಹಾಗೂ ವೈಜ್ಞಾನಿಕ ವಿಧಾನಗಳ ಮೂಲಕ ತನಿಖೆ ನಡೆಸಿದ ಪೊಲೀಸರು, ಅಕ್ಟೋಬರ್ 12ರಂದು ರಾತ್ರಿ ಉಜಿರೆಯಲ್ಲಿ ಪ್ರಶಾಂತನನ್ನು ವಶಕ್ಕೆ ಪಡೆದರು. ಬಳಿಕ ಲಕ್ಕುಂಡಿಯಲ್ಲಿ ಈರಪ್ಪನನ್ನು ವಶಕ್ಕೆ ಪಡೆದು ಅಕ್ಟೋಬರ್ 13ರಂದು ಬಂಧಿಸಿದರು. ಕೊಲೆಗೆ ಬಳಸಿದ ಮೋಟಾರ್ ಸೈಕಲ್ ಹಾಗೂ ಆಯುಧಗಳನ್ನು ಪೊಲೀಸರು ಜಪ್ತಿ ಮಾಡಿಕೊಂಡಿದ್ದಾರೆ. ಬಂಧಿತ ತಂದೆ–ಮಗನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಪ್ರಕರಣ ದಾಖಲಾದ ಮೂರು ದಿನಗಳಲ್ಲೇ ಆರೋಪಿಗಳನ್ನು ಪತ್ತೆಹಚ್ಚಿ ಬಂಧಿಸಿದ ಪೊಲೀಸ್ ತಂಡದ ಕಾರ್ಯವನ್ನು ಎಸ್ಪಿ ಮಿಥುನ್ ಎಚ್.ಎನ್. ಶ್ಲಾಘಿಸಿದರು.

## ಅ. 23ರಂದು ಸಂತೆ, ಜಾತ್ರೆ ರದ್ದು

ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಪಶ್ಚಿಮ ಪದವೀಧರ ಕ್ಷೇತ್ರದ ದ್ವೈವಾರ್ಷಿಕ ಚುನಾವಣೆಯ ಮತದಾನ ಅಕ್ಟೋಬರ್ 23ರಂದು ನಡೆಯಲಿರುವ ಹಿನ್ನೆಲೆಯಲ್ಲಿ, ಅಂದು ರೋಣ ತಾಲೂಕಿನ ಹೊಳೆಆಲೂರು ಹಾಗೂ ಲಕ್ಷ್ಮೇಶ್ವರದಲ್ಲಿ ನಡೆಯುವ ಸಂತೆ, ಜಾತ್ರೆ ಮತ್ತು ಉತ್ಸವಗಳನ್ನು ರದ್ದುಗೊಳಿಸಲಾಗಿದೆ. ಮುಕ್ತ ಹಾಗೂ ಶಾಂತಿಯುತ ಮತದಾನಕ್ಕೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಜಿಲ್ಲಾ ದಂಡಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಈ ಆದೇಶ ಹೊರಡಿಸಿದ್ದಾರೆ.

ಮತದಾರರು ಯಾವುದೇ ಅಡಚಣೆಯಿಲ್ಲದೆ ಮತಗಟ್ಟೆಗೆ ತೆರಳಿ ಮತ ಚಲಾಯಿಸಲು ಅನುಕೂಲವಾಗುವಂತೆ ಈ ಕ್ರಮ ಕೈಗೊಳ್ಳಲಾಗಿದೆ.

ಇದೇ ಚುನಾವಣೆಯ ಹಿನ್ನೆಲೆಯಲ್ಲಿ ಅಕ್ಟೋಬರ್ 21ರ ಸಂಜೆ 4 ಗಂಟೆಯಿಂದ ಅಕ್ಟೋಬರ್ 23ರ ಮಧ್ಯರಾತ್ರಿವರೆಗೆ ಜಿಲ್ಲೆಯಲ್ಲಿ ಶುಷ್ಕ ದಿನ ಘೋಷಿಸಲಾಗಿದೆ. ಈ ಅವಧಿಯಲ್ಲಿ ಮದ್ಯದ ಅಂಗಡಿಗಳು, ಬಾರ್‌ಗಳು, ರೆಸ್ಟೋರೆಂಟ್‌ಗಳು, ಕ್ಲಬ್‌ಗಳು ಹಾಗೂ ಡಿಪೋಗಳು ಸೇರಿದಂತೆ ಮದ್ಯ ಮಾರಾಟಕ್ಕೆ ಪರವಾನಗಿ ಪಡೆದ ಕೇಂದ್ರಗಳಲ್ಲಿ ಮದ್ಯದ ಮಾರಾಟ, ಸರಬರಾಜು ಮತ್ತು ಸೇವೆಯನ್ನು ನಿಷೇಧಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಆದೇಶಿಸಿದ್ದಾರೆ.

### ವಸತಿ ನಿಲಯದ ಬಳಿಯ ಘಟಕ ಸ್ಥಳಾಂತರಕ್ಕೆ ಆಗ್ರಹ

# ಪವನ ಘಟಕಗಳ ವಿರುದ್ಧ ಭೀಮಶಕ್ತಿ ಸಮರ

**ವಿಜಯಸಾಕ್ಷಿ ಸುದ್ದಿ, ಗದಗ**



ಪವನ ವಿದ್ಯುತ್ ಫ್ಯಾನ್‌ಗಳ ನಿರ್ವಾಣ ಘಟಕಗಳಿಂದ ಸೊರಟೂರು ಗ್ರಾಮದ ದಲಿತ ಸಮುದಾಯದ ಜನರು ಹಾಗೂ ಸರ್ಕಾರಿ ವಸತಿ ನಿಲಯದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ ಎಂದು ಆರೋಪಿಸಿ ಭೀಮಶಕ್ತಿ ಸಂಘಟನೆ ಅಕ್ಟೋಬರ್ 9ರಂದು ಗದಗ ನಗರದಲ್ಲಿ ಬೃಹತ್ ಪ್ರತಿಭಟನೆ ಹಾಗೂ ಜಾಗೃತಿ ಪಾದಯಾತ್ರೆ ನಡೆಸಿತು. ಪ್ರತಿಭಟನಾಕಾರರ ಮನವಿ ಸ್ವೀಕರಿಸಿದ ಅಪರ ಜಿಲ್ಲಾಧಿಕಾರಿ ದುರ್ಗೇಶ್ ಎಂ. ಅವರು, ಒಂದು ತಿಂಗಳೊಳಗೆ ಸಂಘಟನೆಯ ಪದಾಧಿಕಾರಿಗಳೊಂದಿಗೆ ವಿಶೇಷ ಸಭೆ ನಡೆಸಿ ಸೂಕ್ತ ಕಾನೂನು ಕ್ರಮದ ಕುರಿತು ಪರಿಶೀಲಿಸುವುದಾಗಿ ಭರವಸೆ ನೀಡಿದರು.

ನಗರದ ಕಿತ್ತೂರು ರಾಣಿ ಚೆನ್ನಮ್ಮ ವೃತ್ತದಿಂದ ಆರಂಭವಾದ ಪಾದಯಾತ್ರೆ ಮುಳಗುಂದ ನಾಕಾ ಹಾಗೂ ಟಿಪ್ಪು ಸುಲ್ತಾನ್ ವೃತ್ತದ ಮಾರ್ಗವಾಗಿ ಜಿಲ್ಲಾಧಿಕಾರಿ ಕಚೇರಿವರೆಗೆ ಸಾಗಿತು. ತಮಟೆ, ಹಲಗೆ ವಾದ್ಯಗಳೊಂದಿಗೆ ನೂರಾರು ಕಾರ್ಯಕರ್ತರು ಘೋಷಣೆ ಕೂಗುತ್ತಾ ಪ್ರತಿಭಟನೆಯಲ್ಲಿ ಪಾಲ್ಗೊಂಡರು.

> ವಸತಿ ನಿಲಯದ ಬಡ ವಿದ್ಯಾರ್ಥಿಗಳು ಹಾಗೂ ಸೊರಟೂರಿನ ದಲಿತ ಕುಟುಂಬಗಳು ಆರೋಗ್ಯ ಮತ್ತು ಸಂಚಾರದ ಸಮಸ್ಯೆ ಎದುರಿಸುತ್ತಿವೆ. ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಕ್ರಮವಾಗದ ಕಾರಣ ಹೋರಾಟಕ್ಕೆ ಇಳಿಯಬೇಕಾಯಿತು. ಅಧಿಕಾರಿಗಳು ಮೊದಲೇ ನಮ್ಮ ಮನವಿಗೆ ಸ್ಪಂದಿಸಿದ್ದರೆ ಪ್ರತಿಭಟನೆ ನಡೆಸುವ ಅನಿವಾರ್ಯತೆ ಬರುತ್ತಿರಲಿಲ್ಲ.
>
> – ಸಿದ್ದಪ್ಪ ಸಣ್ಣತಂಗಿಯವರ,
> ಜಿಲ್ಲಾಧ್ಯಕ್ಷರು, ಭೀಮಶಕ್ತಿ ಸಂಘಟನೆ ಯುವ ಘಟಕ

ವಸತಿ ನಿಲಯದ ಬಳಿ ಇರುವ ಬೋರೊಕೊ ಕಂಪನಿಯ ಪವನ ವಿದ್ಯುತ್ ಫ್ಯಾನ್ ಘಟಕವನ್ನು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತಕ್ಷಣ ಸ್ಥಳಾಂತರಿಸಬೇಕು. ಸಿರೆಂಟಿಕ್ ಕಂಪನಿಯ ವಿರುದ್ಧವೂ ಕಾನೂನು ಕ್ರಮ ಕೈಗೊಳ್ಳಬೇಕು ಎಂಬುದು ಸಂಘಟನೆಯ ಪ್ರಮುಖ ಬೇಡಿಕೆಯಾಗಿದೆ. ಈ ಘಟಕಗಳಿಂದ ವಿದ್ಯಾರ್ಥಿಗಳ ಆರೋಗ್ಯ, ನಿದ್ದೆ, ವಿದ್ಯಾಭ್ಯಾಸ ಹಾಗೂ ಜೀವಕ್ಕೆ ಅಪಾಯ ಉಂಟಾಗುತ್ತಿದೆ ಎಂದು ಸಂಘಟನೆ ಆರೋಪಿಸಿದೆ.

ಸೊರಟೂರು ಗ್ರಾಮದಲ್ಲಿ ಹಿಂದೆ ಮನೆಗಳು ಮುಳುಗಡೆಯಾದ ಕುಟುಂಬಗಳಿಗೆ ನಿವೇಶನ ಒದಗಿಸುವ ಉದ್ದೇಶದಿಂದ ಜಿಲ್ಲಾಡಳಿತ ಸುಮಾರು ಐದು ಎಕರೆ ಜಮೀನು ಮಂಜೂರು ಮಾಡಿತ್ತು. ಈ ಜಾಗದಲ್ಲಿ ಮಾದಿಗ ಸಮುದಾಯದವರಿಗೂ ನಿವೇಶನ ಹಂಚಿಕೆಯಾಗಿದೆ. ಹೀಗಾಗಿ ದಲಿತ ಕುಟುಂಬಗಳ ಹಿತಾಸಕ್ತಿಯನ್ನು ಕಾಪಾಡಬೇಕು ಎಂದು ಸಂಘಟನೆ ಒತ್ತಾಯಿಸಿದೆ.

ಈ ಕುರಿತು ಸೆಪ್ಟೆಂಬರ್ 9ರಂದು ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಹಾಗೂ ಸಹಾಯಕ ನಿರ್ದೇಶಕರು ಮತ್ತು ಗದಗ ತಹಸೀಲ್ದಾರರಿಗೆ ಮನವಿ ಸಲ್ಲಿಸಲಾಗಿತ್ತು. ಆದರೆ ಯಾವುದೇ ಸೂಕ್ತ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ಪ್ರತಿಭಟನೆ ಅನಿವಾರ್ಯವಾಯಿತು ಎಂದು ಸಂಘಟನೆಯ ಮುಖಂಡರು ತಿಳಿಸಿದರು.

ಪಾದಯಾತ್ರೆ ಟಿಪ್ಪು ಸುಲ್ತಾನ್ ವೃತ್ತದ ಬಳಿ ಸಾಗುತ್ತಿದ್ದಾಗ ಹೋರಾಟಗಾರರು ಮತ್ತು ಪೊಲೀಸರ ನಡುವೆ ವಾಗ್ವಾದ ನಡೆಯಿತು ಎಂದು ಸಂಘಟನೆ ಆರೋಪಿಸಿದೆ. ಬಳಿಕ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿಯೂ ಮಾತಿನ ಚಕಮಕಿ ನಡೆದಿದೆ ಎಂದು ಮುಖಂಡರು ಹೇಳಿದರು.

ಹೋರಾಟದ ಸ್ಥಳಕ್ಕೆ ಆಗಮಿಸಿದ ಅಪರ ಜಿಲ್ಲಾಧಿಕಾರಿ ದುರ್ಗೇಶ್ ಎಂ. ಅವರು ಮನವಿ ಸ್ವೀಕರಿಸಿ, ಒಂದು ತಿಂಗಳೊಳಗೆ ಸಂಘಟನೆಯ ಪದಾಧಿಕಾರಿಗಳೊಂದಿಗೆ ವಿಶೇಷ ಸಭೆ ನಡೆಸಿ ಸಮಸ್ಯೆ ಕುರಿತು ಚರ್ಚಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳುವ ಭರವಸೆ ನೀಡಿದರು. ಈ ಭರವಸೆಯ ಬಳಿಕ ಸಂಘಟನೆಯ ಪದಾಧಿಕಾರಿಗಳು ಅಧಿಕೃತವಾಗಿ ಮನವಿ ಪತ್ರ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಭೀಮಶಕ್ತಿ ಸಂಘಟನೆಯ ರಾಜ್ಯ ಕಾನೂನು ಸಲಹೆಗಾರ, ವಕೀಲ ಮೈಲಾರಪ್ಪ ಡಿ.ಎಚ್., ರಾಜ್ಯ ಸಂಚಾಲಕ ನಿಂಗಪ್ಪ ಕೆಳಗೇರಿ, ಜಿಲ್ಲಾಧ್ಯಕ್ಷ ಅಣ್ಣಪ್ಪ ಗುತ್ತೆಮ್ಮನವರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮುತ್ತಪ್ಪ ಮ್ಯಾಗೇರಿ, ಗೌರವಾಧ್ಯಕ್ಷ ಮರಿಯಪ್ಪ ಪೂಜಾರ, ಯುವ ಘಟಕದ ಜಿಲ್ಲಾಧ್ಯಕ್ಷ ಸಿದ್ದಪ್ಪ ಸಣ್ಣತಂಗಿಯವರ, ತಾಲೂಕು ಅಧ್ಯಕ್ಷ ಕೋಟೇಶ ಪೂಜಾರ, ಶಿವು ದೊಡ್ಡಮನಿ, ಗಣೇಶ ದೊಡ್ಡಮನಿ, ಮಂಜು ದೊಡ್ಡಮನಿ, ಕೃಷ್ಣ ಮರಾಠಿ, ಯಮನಪ್ಪ, ನಿಂಗಪ್ಪ ಹರಿಜನ, ಮೈಲಾರಪ್ಪ ಪೂಜಾರ, ಮಾರುತಿ ಮುದ್ದಿಯಮ್ಮನವರ, ಮಂಜು ಬೈರಮ್ಮನವರ ಸೇರಿದಂತೆ ಸಂಘಟನೆಯ ಪದಾಧಿಕಾರಿಗಳು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು.

## ಎನ್‌ಎಸ್‌ಎಸ್ ಶಿಬಿರಾರ್ಥಿಗಳಿಂದ ಶ್ರಮದಾನ

**ವಿಜಯಸಾಕ್ಷಿ ಸುದ್ದಿ, ಗದಗ**



ತಾಲೂಕಿನ ಬಳಗಾನೂರ ಗ್ರಾಮದ ಚಿಕೇನಕೊಪ್ಪದ ಶ್ರೀ ಚನ್ನವೀರ ಶರಣರ ಪದವಿ ಪೂರ್ವ ಕಾಲೇಜಿನ ಎನ್‌ಎಸ್‌ಎಸ್ ಶಿಬಿರಾರ್ಥಿಗಳು ಗ್ರಾಮದ ಸರ್ಕಾರಿ ಹಿರಿಯ ಹೆಣ್ಣುಮಕ್ಕಳ ಶಾಲಾ ಆವರಣದಲ್ಲಿ ಸ್ವಚ್ಛತಾ ಶ್ರಮದಾನ ನಡೆಸಿದರು.

ನಂತರ ಪಶು ವೈದ್ಯಕೀಯ ಇಲಾಖೆಯ ಸಹಯೋಗದಲ್ಲಿ ಬರಡು ದನಗಳಿಗೆ ಚಿಕಿತ್ಸೆ ನೀಡಲಾಯಿತು. ನಾಯಿ ಮತ್ತು ಬೆಕ್ಕುಗಳಿಗೆ ರೇಬಿಸ್ ರೋಗ ತಡೆಗಟ್ಟುವ ಲಸಿಕೆ ಹಾಕುವ ಕಾರ್ಯಕ್ರಮವೂ ನಡೆಯಿತು.

ಈ ಸಂದರ್ಭದಲ್ಲಿ ಪಶು ವೈದ್ಯಾಧಿಕಾರಿಗಳಾದ ಡಾ. ಶ್ರೀಕಾಂತ ಕಲಬುರ್ಗಿ, ಡಾ. ಜಗದೀಶ ಮಟ್ಟಿ, ಕಿರಿಯ ಪಶು ವೈದ್ಯಕೀಯ ಪರಿವೀಕ್ಷಕ ಶಿವರಾಜ ಸಾಲಿ ಹಾಗೂ ಸಿಬ್ಬಂದಿ, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಹಾಗೂ ಪ್ರಾಚಾರ್ಯ ಎಸ್.ಬಿ. ಹಿರೇಮಠ, ವೀರೇಶ ಬಡಿಗೇರ, ಉಪನ್ಯಾಸಕರು ಮತ್ತು ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

## ಪ್ರೇಕ್ಷಕರ ಪ್ರೀತಿಯ ಸುರಿಮಳೆ, 'ಪ್ರೇಮದ ಊರಲಿ'ಗೆ ಹೌಸ್‌ಫುಲ್ ಸಂಭ್ರಮ




**ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ**

ಗೋಲ್ಡನ್ ಸ್ಟಾರ್ ಗಣೇಶ್ ಅಭಿನಯದ 'ಪ್ರೇಮದ ಊರಲಿ' ಚಿತ್ರಕ್ಕೆ ಹಗರಿಬೊಮ್ಮನಹಳ್ಳಿಯಲ್ಲಿ ಪ್ರೇಕ್ಷಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಪಟ್ಟಣದ ಕೃಷ್ಣ ಪಿಕ್ಚರ್ ಪ್ಯಾಲೇಸ್ ಹಾಗೂ ಶ್ರೀ ಕೊಟ್ಟೂರೇಶ್ವರ ಚಿತ್ರಮಂದಿರಗಳಲ್ಲಿ ಚಿತ್ರ ವೀಕ್ಷಣೆಗೆ ಸಿನಿಪ್ರೇಮಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದು, ಚಿತ್ರಮಂದಿರಗಳ ಸುತ್ತಮುತ್ತ ಸಿನಿಮಾ ಸಂಭ್ರಮ ಮನೆಮಾಡಿದೆ.

ಚಿತ್ರದ ಮೇಲಿನ ಕುತೂಹಲ ಹಾಗೂ ಗಣೇಶ್ ಅಭಿಮಾನಿಗಳ ಉತ್ಸಾಹದಿಂದ ಟಿಕೆಟ್‌ಗಾಗಿ ಪ್ರೇಕ್ಷಕರು ಮುಗಿಬಿದ್ದಿದ್ದಾರೆ. ಯುವಕರು ಸೇರಿದಂತೆ ವಿವಿಧ ವಯೋಮಾನದ ಚಿತ್ರಪ್ರೇಮಿಗಳು ಚಿತ್ರ ವೀಕ್ಷಿಸಲು ಆಸಕ್ತಿ ತೋರಿದ್ದು, ಚಿತ್ರಮಂದಿರಗಳ ಆವರಣದಲ್ಲಿ ಜನಜಂಗುಳಿ ಕಂಡುಬಂದಿದೆ.

ಕನ್ನಡ ಚಿತ್ರರಂಗದಲ್ಲಿ 'ಪ್ರೇಮದ ಊರಲಿ' ಚಿತ್ರದ ಕುರಿತು ಚರ್ಚೆ ನಡೆಯುತ್ತಿದ್ದು, ಪ್ರೇಕ್ಷಕರ ಸ್ಪಂದನೆ ಚಿತ್ರತಂಡದ ಉತ್ಸಾಹ ಹೆಚ್ಚಿಸಿದೆ. ದೊಡ್ಡ ಪರದೆಯಲ್ಲಿ ಚಿತ್ರ ವೀಕ್ಷಿಸಲು ಪ್ರೇಕ್ಷಕರು ತೋರಿದ ಆಸಕ್ತಿ ಕನ್ನಡ ಸಿನಿಮಾಗಳ ಮೇಲಿನ ಅಭಿಮಾನವನ್ನು ಮತ್ತೊಮ್ಮೆ ಎತ್ತಿತೋರಿಸಿದೆ.

ಈ ಸಂದರ್ಭದಲ್ಲಿ ಕೃಷ್ಣ ಪಿಕ್ಚರ್ ಪ್ಯಾಲೇಸ್ ಮಾಲೀಕ ಅಂಬಾಡಿ ನಾಗರಾಜ ಅವರು 'ಪ್ರೇಮದ ಊರಲಿ' ಚಿತ್ರ ಶತದಿನೋತ್ಸವ ಆಚರಿಸಲಿ ಎಂದು ಶುಭ ಹಾರೈಸಿದರು. ಮಲ್ಲಿಕಾರ್ಜುನ, ಶಿವಣ್ಣ, ಚಿತ್ರಮಂದಿರದ ಸಿಬ್ಬಂದಿ ಹಾಗೂ ಪ್ರೇಕ್ಷಕರು ಉಪಸ್ಥಿತರಿದ್ದರು.

## ಬಳಗಾನೂರಿನಲ್ಲಿ ಎನ್‌ಎಸ್‌ಎಸ್ ಶಿಬಿರಕ್ಕೆ ಚಾಲನೆ

**ವಿಜಯಸಾಕ್ಷಿ ಸುದ್ದಿ, ಗದಗ**



ತಾಲೂಕಿನ ಬಳಗಾನೂರು ಗ್ರಾಮದ ಚಿಕೇನಕೊಪ್ಪದ ಶ್ರೀ ಚನ್ನವೀರ ಶರಣರ ಪದವಿ ಪೂರ್ವ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಘಟಕದ ವಾರ್ಷಿಕ ವಿಶೇಷ ಶಿಬಿರ ಉದ್ಘಾಟನೆಗೊಂಡಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಗ್ರಾಮದ ಹಿರಿಯ ಶೇಖಪ್ಪ ಎಸ್. ಅಗಸಿಮನಿ, ವಿದ್ಯಾರ್ಥಿಗಳು ಸೇವಾ ಮನೋಭಾವ ಬೆಳೆಸಿಕೊಂಡು ಸಮಾಜಕ್ಕೆ ಉತ್ತಮ ಸಂದೇಶ ನೀಡಬೇಕು. ಸಮಾಜಮುಖಿ ಕಾರ್ಯಗಳ ಮೂಲಕ ಜನರ ವಿಶ್ವಾಸ ಗಳಿಸಬೇಕು ಎಂದು ಕರೆ ನೀಡಿದರು.

ಗ್ರಾಮದ ಹಿರಿಯ ಶೇಖಪ್ಪ ಎಚ್. ಅಗಸಿಮನಿ ಮಾತನಾಡಿ, ಬಳಗಾನೂರು ಗ್ರಾಮವನ್ನು ಮದ್ಯಪಾನ ಮುಕ್ತ ಗ್ರಾಮವನ್ನಾಗಿಸುವ ನಿಟ್ಟಿನಲ್ಲಿ ಯುವಜನರಲ್ಲಿ ಜಾಗೃತಿ ಮೂಡಿಸಬೇಕು. ಇತ್ತೀಚಿನ ದಿನಗಳಲ್ಲಿ ಯುವಕರು ದುಶ್ಚಟಗಳಿಗೆ ಬಲಿಯಾಗುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ಇಂತಹ ಸಂದರ್ಭದಲ್ಲಿ ಎನ್‌ಎಸ್‌ಎಸ್ ಘಟಕವು ಯುವಜನರಲ್ಲಿ ಜಾಗೃತಿ ಮೂಡಿಸುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದರು.

ರಾಷ್ಟ್ರೀಯ ಸೇವಾ ಯೋಜನೆಯು ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯತೆ, ದೇಶಾಭಿಮಾನ, ಸ್ವಯಂಶಿಸ್ತು ಹಾಗೂ ನಾಯಕತ್ವ ಗುಣಗಳನ್ನು ಬೆಳೆಸಲು ಸಹಕಾರಿಯಾಗಿದೆ. ವಿದ್ಯಾರ್ಥಿಗಳು ದುಶ್ಚಟಗಳಿಂದ ದೂರವಿದ್ದು, ಸಮಾಜದ ಅಭಿವೃದ್ಧಿಗೆ ತಮ್ಮ ಕೊಡುಗೆ ನೀಡಬೇಕು ಎಂದು ತಿಳಿಸಿದರು.

ಕಾಲೇಜಿನ ಪ್ರಾಚಾರ್ಯ ಎಸ್.ಬಿ. ಹಿರೇಮಠ ಎನ್‌ಎಸ್‌ಎಸ್‌ನ ಹಿನ್ನೆಲೆ, ಉದ್ದೇಶ ಹಾಗೂ ಮಹತ್ವದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಗ್ರಾಮದ ಹಿರಿಯರಾದ ಶೇಖಪ್ಪ ಎಸ್. ಅಗಸಿಮನಿ, ಶೇಖಪ್ಪ ಎಚ್. ಅಗಸಿಮನಿ, ಶಿವಲಿಂಗವ್ವಜಿಗಳೂರು, ಶೈಕ್ಷಣಿಕ ಸಂಯೋಜಕ ಎಚ್.ಬಿ. ಯಲಬುರ್ಗಿ, ಕಾಲೇಜಿನ ಪ್ರಾಚಾರ್ಯರು, ಉಪನ್ಯಾಸಕರು ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು. ಪ್ರಕಾಶ ಬರದೂರ ನಿರೂಪಿಸಿದರು.

### ಅ. 16, 18ರಂದು ಉಚಿತ ಆರೋಗ್ಯ ತಪಾಸಣೆ

**ವಿಜಯಸಾಕ್ಷಿ ಸುದ್ದಿ, ಗದಗ**

ಗದಗ-ಬೆಟಗೇರಿ ರೋಟರಿ ಕ್ಲಬ್ ವತಿಯಿಂದ ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಅಕ್ಟೋಬರ್ 16ರಂದು ಆಯುರ್ವೇದ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ ಅಕ್ಟೋಬರ್ 18ರಂದು ಮತ್ತೊಂದು ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಇದರೊಂದಿಗೆ ಇ-ತ್ಯಾಜ್ಯ ಸಂಗ್ರಹ ಅಭಿಯಾನವೂ ನಡೆಯುತ್ತಿದೆ.

ಅಕ್ಟೋಬರ್ 16ರಂದು ಡಿಜಿಎಂ ಆಯುರ್ವೇದ ಮಹಾವಿದ್ಯಾಲಯದ ಶಿವಾನಂದ ಆಸ್ಪತ್ರೆಯ ಪ್ರಾಚಾರ್ಯ ಡಾ. ಸಂತೋಷ ಬೆಳವಡಿ ಅವರ ಸಹಕಾರದಲ್ಲಿ ತಜ್ಞ ವೈದ್ಯರಾದ ಡಾ. ಯಾಸ್ಮಿನ್ ಫಣಿಬಂದ್, ಡಾ. ಕುಮಾರ ಕಂಠಿಮಠ ಹಾಗೂ ಡಾ. ರೋಹಿಣಿ ಪಾಟೀಲ ಅವರ ತಂಡ ಉಚಿತ ಆರೋಗ್ಯ ತಪಾಸಣೆ ನಡೆಸಿ ಚಿಕಿತ್ಸೆ ನೀಡಲಿದೆ.

ಅಕ್ಟೋಬರ್ 18ರಂದು ಗದಗ ಜಿಮ್ಸ್ ಆಸ್ಪತ್ರೆಯ ತಜ್ಞ ವೈದ್ಯರ ತಂಡ ಸಾರ್ವಜನಿಕರ ಆರೋಗ್ಯ ತಪಾಸಣೆ ನಡೆಸಿ ಅಗತ್ಯ ಸಲಹೆ ನೀಡಲಿದೆ. ಡಿಸೆಂಬರ್‌ನಲ್ಲಿ ದಂತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಆಯೋಜಿಸಲಾಗಿದ್ದು, ಅದಕ್ಕಾಗಿ ದಂತಪಂಕ್ತಿ ಅಳವಡಿಸಿಕೊಳ್ಳಲು ಅಗತ್ಯವಿರುವ ಫಲಾನುಭವಿಗಳ ಆಯ್ಕೆಯೂ ಇದೇ ಸಂದರ್ಭದಲ್ಲಿ ನಡೆಯಲಿದೆ.

## ದೇಶದ ಆಡಳಿತ ವ್ಯವಸ್ಥೆ ಅರಿಯುವುದು ಯುವಜನರ ಕರ್ತವ್ಯ

**ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ**




ದೇಶದ ಆಡಳಿತ ವ್ಯವಸ್ಥೆ, ಸಂಸತ್ತಿನ ಕಾರ್ಯವೈಖರಿ ಹಾಗೂ ಸಂವಿಧಾನದ ಆಶಯಗಳನ್ನು ಅರ್ಥಮಾಡಿಕೊಳ್ಳುವುದು ಯುವಜನರ ಕರ್ತವ್ಯವಾಗಿದೆ ಎಂದು ಜೆಎಂಎಫ್‌ಸಿ ನ್ಯಾಯಾಧೀಶರಾದ ಮಧುಸೂದನ ಹೇಳಿದರು.

ಪಟ್ಟಣದ ಜಿ.ವಿ.ಪಿ.ಪಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ತಾಲೂಕು ಆಡಳಿತ, ಸಮಾಜ ಕಲ್ಯಾಣ ಇಲಾಖೆ, ತಾಲೂಕು ಪಂಚಾಯಿತಿ, ಪುರಸಭೆ ಹಾಗೂ ಶಿಕ್ಷಣ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಮತ್ತು ಅಣಕು ಸಂಸತ್ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂಸತ್ತಿಗೆ ಮಹತ್ವದ ಸ್ಥಾನವಿದೆ. ಸಂಸದೀಯ ಪ್ರಕ್ರಿಯೆಗಳು, ಜನಪ್ರತಿನಿಧಿಗಳ ಜವಾಬ್ದಾರಿಗಳು ಹಾಗೂ ಸಂವಿಧಾನದ ಆಶಯಗಳನ್ನು ಯುವಜನರು ಅರಿತುಕೊಳ್ಳಬೇಕು. ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ಜವಾಬ್ದಾರಿಯಿದ್ದು, ದೇಶದ ಆಡಳಿತ ವ್ಯವಸ್ಥೆಯ ಬಗ್ಗೆ ತಿಳಿದುಕೊಳ್ಳುವುದು ಅಗತ್ಯವಾಗಿದೆ ಎಂದರು.

ಅಣಕು ಸಂಸತ್ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣ, ವಾಕ್ಚಾತುರ್ಯ, ತಾರ್ಕಿಕ ಚಿಂತನೆ, ಕಾನೂನಿನ ಅರಿವು ಹಾಗೂ ಸಾಮಾಜಿಕ ಜವಾಬ್ದಾರಿಯನ್ನು ಬೆಳೆಸಲು ಸಹಕಾರಿಯಾಗುತ್ತವೆ. ಇಂತಹ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಮೂಲಕ ವಿದ್ಯಾರ್ಥಿಗಳು ಭವಿಷ್ಯದ ಜವಾಬ್ದಾರಿಯುತ ನಾಗರಿಕರಾಗಿ ರೂಪುಗೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ಮಂಜುನಾಥ ಉಲವತ್ತಿ ಶೆಟ್ಟರ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಜಗದೀಶ, ಕ್ಷೇತ್ರ ಶಿಕ್ಷಣಾಧಿಕಾರಿ ಜಗದೀಶ, ಡಾ. ಅರುಣ್ ಶಾನುಭೋಗರ, ಡಾ. ಜೋಗಿನಕಟ್ಟೆ ನಾಗರಾಜ್, ಸುಬ್ಬಯ್ಯ, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ವಿಶ್ವನಾಥ ಪಾಲಯ್ಯನಕೋಟೆ, ಸಮುದಾಯ ಅಭಿವೃದ್ಧಿ ಅಧಿಕಾರಿ ಬಸವರಾಜ್, ಬೆಟಗೇರಿ ದುರುಗಪ್ಪ, ನಾಗರಾಜ್ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಅಧೀಕ್ಷಕಿ ಶೋಭಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಲಕ್ಷ್ಮೇಶ್ವರ: ಪಟ್ಟಣದ ಸವಣೂರು ರಸ್ತೆಯಲ್ಲಿರುವ ತಿರುಪತಿ ಮಾದರಿಯ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ಶರನ್ನವರಾತ್ರಿ ಅಂಗವಾಗಿ ನಿತ್ಯ ವಿಶೇಷ ಪೂಜೆ ಹಾಗೂ ವಿವಿಧ ಅಲಂಕಾರಗಳೊಂದಿಗೆ ದೇವರ ಆರಾಧನೆ ನಡೆಯುತ್ತಿದೆ. ಮಂಗಳವಾರ ಶ್ರೀ ವೆಂಕಟೇಶ್ವರ ದೇವರಿಗೆ ವರಾಹಾವತಾರದ ಅಲಂಕಾರ ಮಾಡಲಾಗಿತ್ತು. ನೂರಾರು ಭಕ್ತರು ದೇವರ ದರ್ಶನ ಪಡೆದು ಪುನೀತರಾದರು.

ದೇವಸ್ಥಾನದಲ್ಲಿ ನಿತ್ಯ ವಿಶೇಷ ಅಲಂಕಾರ, ನಂದಾದೀಪ ಸ್ಥಾಪನೆ, ಧರ್ಮಧ್ವಜಾರೋಹಣ, ಪಲ್ಲಕ್ಕಿ ಉತ್ಸವ ಹಾಗೂ ಮಹಾಮಂಗಳಾರತಿ ನೆರವೇರಿಸಲಾಗುತ್ತಿದೆ. ಬಳಿಕ ಭಕ್ತರಿಗೆ ಮಹಾಪ್ರಸಾದದ ವ್ಯವಸ್ಥೆ ಮಾಡಲಾಗಿದೆ.



ಗದಗ: ನಗರದ ಶಹಾಪುರ ಪೇಟೆಯ ಗಡ್ಡದೇವರಮಠ ಓಣಿಯಲ್ಲಿರುವ ಮಹಾಲಕ್ಷ್ಮೀ ದೇವಸ್ಥಾನದ ಪ್ರಥಮ ವಾರ್ಷಿಕೋತ್ಸವದ ಅಂಗವಾಗಿ ಮಹಾಲಕ್ಷ್ಮೀ ಮಹಿಳಾ ಮಂಡಳದ ವತಿಯಿಂದ ನವರಾತ್ರಿ ದಸರಾ ಹಬ್ಬದ ವಿಶೇಷ ಪೂಜೆ ಹಾಗೂ ರುದ್ರಾಭಿಷೇಕ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಮಹಿಳಾ ಮಂಡಳದ ಸದಸ್ಯರೆಲ್ಲರೂ ಒಂದೇ ಬಣ್ಣದ ಸೀರೆಗಳನ್ನು ಧರಿಸಿ, ಒಗ್ಗಟ್ಟು ಮತ್ತು ಸಂಭ್ರಮದೊಂದಿಗೆ ವಾರ್ಷಿಕೋತ್ಸವದಲ್ಲಿ ಪಾಲ್ಗೊಂಡರು.

## ಅಡವೀಂದ್ರಸ್ವಾಮಿ ಮಠದಲ್ಲಿ ಇಂದು ಮಹಿಳೆಯರ ಅಡುಗೆ ಸ್ಪರ್ಧೆ

**ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ಅಡವೀಂದ್ರಸ್ವಾಮಿ ಮಠದಲ್ಲಿ 2026ನೇ ಸಾಲಿನ ದಸರಾ ಮಹೋತ್ಸವದ ಅಂಗವಾಗಿ ಅ. 15ರಂದು ಮಧ್ಯಾಹ್ನ 12 ಗಂಟೆಗೆ ಮಹಿಳೆಯರಿಗಾಗಿ ಅಡುಗೆ ಸ್ಪರ್ಧೆ ಆಯೋಜಿಸಲಾಗಿದೆ. ಸಿರಿಧಾನ್ಯದ ಸಜ್ಜೆಯಿಂದ ತಯಾರಿಸಿದ ಸಿಹಿ ಹಾಗೂ ಖಾರ ಪದಾರ್ಥಗಳ ಪ್ರದರ್ಶನವೂ ನಡೆಯಲಿದೆ.

ಸಂಜೆ 6.30ಕ್ಕೆ 46ನೇ ವರ್ಷದ ಶ್ರೀದೇವಿ ಪುರಾಣ ಪ್ರವಚನ ಜರುಗಲಿದೆ. ಮಹಾತ್ಮ ಗಾಂಧಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಕುಲಪತಿ ಡಾ. ಸುರೇಶ ನಾಡಗೌಡ, ಹರಿಜಾತ್ರೋತ್ಸವ ಸಮಿತಿ ಅಧ್ಯಕ್ಷ ಕೊಟ್ರಪ್ಪ ಕಮತರ, ಚನ್ನಬಸವ್ವ ಕಮತರ, ಕಾರ್ಯಾಧ್ಯಕ್ಷ ಫಕೀರಪ್ಪ ಹೆಬಸೂರ, ಗದಗ ಹೆಸ್ಕಾಂ ಸಹಾಯಕ ಅಭಿಯಂತರ ಶಬ್ಬೀರ ಮುಲ್ಲಾ ಹಾಗೂ ಪರವೀನ್ ಮುಲ್ಲಾ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಶ್ರೀಮಠದ ಧರ್ಮದರ್ಶಿ ಮಹೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.

ಪಂ. ರಾಜಗುರು ಗುರುಸ್ವಾಮಿ ಕಲಕೇರಿ ಹಾಗೂ ಚನ್ನಬಸಯ್ಯ ಶಾಸ್ತ್ರಿಗಳು ಹೇಮಗಿರಿಮಠ ಅವರು ಶ್ರೀದೇವಿ ಪುರಾಣ ಪ್ರವಚನ ನಡೆಸಿಕೊಡುವರು.

ಪ್ರಸಾದ ಸೇವೆಯನ್ನು ಈಶಣ್ಣ ಮುನವಳ್ಳಿ, ವಿ.ಎಂ. ಹಿರೇಮಠ, ಬಿ.ಬಿ. ಹೂಗಾರ, ಎಂ.ಬಿ. ಹೂಗಾರ, ಶಿವಾನಂದ ಮೇಟಿ, ಸುಮಿತ್ರಾ ಹೆಬ್ಬಾಳ, ಶಿವಲೀಲಾ ಶೆಟ್ಟರ, ಶಂಕರಗೌಡ ಪಾಟೀಲ, ಶರದ್ ಹುಲ್ಲತ್ತಿ, ಜಿ.ಎಂ. ಯಾನಮಶೆಟ್ಟಿ, ವಿಜಯಕುಮಾರ ಕಬಾಡರ ಹಾಗೂ ನೀಲವ್ವ ವಿಭೂತಿಮಠ ವಹಿಸಲಿದ್ದಾರೆ.

ಜಾತ್ರಾಮಹೋತ್ಸವ ಸಮಿತಿಯ ಗೌರವಾಧ್ಯಕ್ಷ ಸದಾಶಿವಯ್ಯ ಮದರಿಮಠ, ಅಧ್ಯಕ್ಷ ಸಂತೋಷ ಮಹೇಶಚಂದ್ರ ಕಬಾಡರ, ಉಪಾಧ್ಯಕ್ಷರಾದ ಪ್ರಕಾಶ ಅಕ್ಕಿ ಮತ್ತು ವಿನಾಯಕ ಪಾಟೀಲ, ಕಾರ್ಯದರ್ಶಿ ಶಿವಪ್ರಭು ನೀಲಗುಂದ, ಸಹಕಾರ್ಯದರ್ಶಿ ಬಸವರಾಜ ಬ್ಯಾಹಟ್ಟಿ, ಕೋಶಾಧ್ಯಕ್ಷ ಪ್ರಭುಗೌಡ ಪಾಟೀಲ, ಮಹಿಳಾ ಅಧ್ಯಕ್ಷರಾದ ಶಿವಲೀಲಾ ಅಕ್ಕಿ, ಅನ್ನಪೂರ್ಣೇಶ್ವರಿ ಕಬಾಡರ, ಅಶ್ವಿನಿ ನೀಲಗುಂದ, ಅಮೃತಾ ವಾರಕರ, ಶ್ರೀವೇದಾ ಬಿದರೂರ ಸೇರಿದಂತೆ ನಿರ್ದೇಶಕ ಮಂಡಳಿ ಸದಸ್ಯರು ಉಪಸ್ಥಿತರಿರುವರು.

## ದುರ್ಗುಣಗಳ ಸಂಹಾರವೇ ದೇವಿ ಆರಾಧನೆಯ ಸಂಕಲ್ಪ

**ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ**



ಮನುಷ್ಯನಲ್ಲಿರುವ ಅಹಂಕಾರ, ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮತ್ಸರಗಳನ್ನು ತೊಡೆದುಹಾಕಿ, ಸಂಕಲ್ಪದೊಂದಿಗೆ ದೇವಿಯ ಆರಾಧನೆ ಮಾಡುವ ಮೂಲಕ ಜೀವನದಲ್ಲಿ ಉನ್ನತಿ ಸಾಧಿಸಬೇಕು ಎಂದು ವೇದಮೂರ್ತಿ ಶಂಕ್ರಯ್ಯ ಹಿರೇಮಠ ಹೇಳಿದರು.

ಗ್ರಾಮದ ದಂಡಿನ ದುರ್ಗಾದೇವಿ ದೇವಸ್ಥಾನದಲ್ಲಿ ಹಮ್ಮಿಕೊಂಡಿರುವ 26ನೇ ವರ್ಷದ ದೇವಿ ಪುರಾಣ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಜಗತ್ತಿಗೆ ಮಾರಕವಾಗಿದ್ದ ರಕ್ತಬೀಜಾಸುರನಂತಹ ರಾಕ್ಷಸರನ್ನು ದೇವಿಯು ವಿವಿಧ ಅವತಾರಗಳ ಮೂಲಕ ಸಂಹರಿಸಿ ಲೋಕಕ್ಕೆ ಬೆಳಕು ನೀಡಿದಳು. ದೇವಿಯ ಈ ಚರಿತ್ರೆ ಮನುಷ್ಯನ ಒಳಗಿನ ದುರ್ಗುಣಗಳನ್ನು ಗೆಲ್ಲುವ ಸಂದೇಶ ನೀಡುತ್ತದೆ ಎಂದರು.

ದೇವಿ ಪುರಾಣವು ಒಂಬತ್ತು ದಿನಗಳ ಕಾಲ ನಡೆಯುವ ಮಹತ್ವದ ಧಾರ್ಮಿಕ ಕಾರ್ಯಕ್ರಮವಾಗಿದೆ. ಮನುಷ್ಯ ತನ್ನಲ್ಲಿರುವ ಅರಿಷಡ್ವರ್ಗಗಳನ್ನು ನಿಯಂತ್ರಿಸಿಕೊಂಡು ಅಹಂಕಾರವನ್ನು ತೊರೆದು ಸನ್ಮಾರ್ಗದಲ್ಲಿ ನಡೆಯಬೇಕು. ಪುರಾಣದ ಅಂತಿಮ ದಿನವನ್ನು ವಿಜಯದಶಮಿಯಾಗಿ ಆಚರಿಸುವುದು ಒಳಿತಿನ ವಿಜಯದ ಸಂಕೇತವಾಗಿದೆ ಎಂದು ತಿಳಿಸಿದರು.

ಸವಣೂರು ತಾಲೂಕಿನ ತೊಂಡೂರು ಗ್ರಾಮದ ವಿರುಪಾಕ್ಷಯ್ಯ ಶಾಸ್ತ್ರಿಗಳು ಹಿರೇಮಠ ಅವರು ದೇವಿ ಪುರಾಣದ ಪೀಠಿಕೆ ಹಾಗೂ ದೇವಿಯ ವಿವಿಧ ಅವತಾರಗಳ ಮಹತ್ವವನ್ನು ವಿವರಿಸಿದರು. ಮಾನಪ್ಪ ಬಡಿಗೇರ ಪಠಣ ಆರಂಭಿಸಿದರು. ಮಂಜುನಾಥ ಗರ್ಜಪ್ಪನವರ ಹಾಗೂ ಈರಪ್ಪ ಕರಿಯಲ್ಲಪ್ಪನವರ ಸಂಗೀತ ಸೇವೆ ಸಲ್ಲಿಸಿದರು. ಇದಕ್ಕೂ ಮುನ್ನ ಬೆಳಿಗ್ಗೆ ದೇವಿಯ ಮೂರ್ತಿಗೆ ರುದ್ರಾಭಿಷೇಕ ನೆರವೇರಿಸಲಾಯಿತು.

ಕಾರ್ಯಕ್ರಮದಲ್ಲಿ ಕೊಟ್ರಯ್ಯ ಶಾಸ್ತ್ರಿಗಳು ನರಗುಂದಮಠ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಎಸ್.ಬಿ. ಕಲಕೇರಿ, ವೀರಯ್ಯ ಗಂಧದ, ಈರಪ್ಪ ಅಜಿನಾಳ, ಶಿವಪ್ಪ ಕಮತರ, ಅಂದಪ್ಪ ಮದ್ನೂರ, ಕುಶ ಕವಲೂರು, ಈರಣ್ಣ ತಿಮ್ಮಾಪೂರ, ಬಸವರಾಜ ಮುಳ್ಳಾಳ, ಕಳಕೇಶ ಟೆಂಗಿನಕಾಯಿ, ನೀಲಮ್ಮ ವಡ್ಡರ ಹಾಗೂ ಪ್ರೇಮಾ ಮಟ್ಟಿ ಉಪಸ್ಥಿತರಿದ್ದರು. ಎನ್.ಐ. ಕಿರಟಗೇರಿ ನಿರೂಪಿಸಿ ವಂದಿಸಿದರು.

## ಬರಪೀಡಿತ ತಾಲೂಕುಗಳ ಸಂಖ್ಯೆ 226ಕ್ಕೆ ಏರಿಕೆ

**ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ರಾಜ್ಯದಲ್ಲಿ ಮಳೆಯ ಕೊರತೆಯಿಂದ ಬರದ ಪರಿಸ್ಥಿತಿ ಮತ್ತಷ್ಟು ವ್ಯಾಪಿಸುತ್ತಿದ್ದು, ಹೊಸದಾಗಿ 9 ತಾಲೂಕುಗಳನ್ನು ಬರಪೀಡಿತ ಪಟ್ಟಿಗೆ ಸೇರಿಸಲು ಸರ್ಕಾರ ನಿರ್ಧರಿಸಿದೆ. ಇದರಿಂದ ರಾಜ್ಯದಲ್ಲಿ ಬರಪೀಡಿತ ತಾಲೂಕುಗಳ ಸಂಖ್ಯೆ 226ಕ್ಕೆ ಏರಿಕೆಯಾಗಲಿದೆ ಎಂದು ಸಚಿವ ಡಾ. ಜಿ. ಪರಮೇಶ್ವರ್ ತಿಳಿಸಿದ್ದಾರೆ.

ಹೊಸದಾಗಿ ಗುರುತಿಸಿರುವ ತಾಲೂಕುಗಳಲ್ಲಿ ಗ್ರೌಂಡ್ ಟ್ರೂಥಿಂಗ್ ಪ್ರಕ್ರಿಯೆ ಪೂರ್ಣಗೊಂಡಿದೆ. ಇನ್ನು ಕೆಲವು ತಾಲೂಕುಗಳಲ್ಲಿ ಟ್ರಿಗರ್-1 ಮಾನದಂಡಗಳ ಪರಿಶೀಲನೆ ನಡೆಯುತ್ತಿದ್ದು, ಅರ್ಹತೆ ಪಡೆದರೆ ಮುಂದಿನ ಹಂತದ ಪರಿಶೀಲನೆಗೆ ಕಳುಹಿಸಲಾಗುವುದು ಎಂದು ಅವರು ಹೇಳಿದ್ದಾರೆ. ರಾಜ್ಯದಲ್ಲಿ ಬರದಿಂದ ಉಂಟಾಗಿರುವ ನಷ್ಟದ ಅಂದಾಜು ಅಂತಿಮಗೊಳಿಸುವ ಪ್ರಕ್ರಿಯೆ ನಡೆಯುತ್ತಿದೆ. ಇನ್ನೊಂದು ವಾರದಲ್ಲಿ ಅಂತಿಮ ಮೆಮೊರಾಂಡಮ್ ಸಿದ್ಧವಾಗುವ ನಿರೀಕ್ಷೆಯಿದ್ದು, ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯಾ ನಿಧಿ ಮಾರ್ಗಸೂಚಿಗಳ ಪ್ರಕಾರ ಪರಿಹಾರದ ಮೊತ್ತ ಲೆಕ್ಕಹಾಕಲಾಗುತ್ತದೆ.

ಕಳೆದ ವರ್ಷ ಬರ ಪರಿಹಾರಕ್ಕಾಗಿ ಕೇಂದ್ರ ಸರ್ಕಾರದಿಂದ ಸುಮಾರು 18 ಸಾವಿರ ಕೋಟಿ ರೂ. ಕೋರಲಾಗಿತ್ತು. ಈ ಬಾರಿ ಬರದ ವ್ಯಾಪ್ತಿ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಪರಿಹಾರದ ಬೇಡಿಕೆಯೂ ಹೆಚ್ಚಾಗುವ ಸಾಧ್ಯತೆಯಿದೆ ಎಂದು ಪರಮೇಶ್ವರ್ ತಿಳಿಸಿದ್ದಾರೆ. ಬರ ಪರಿಹಾರಕ್ಕೆ ಸಂಬಂಧಿಸಿದಂತೆ ಓಆಖಈ ಮಾರ್ಗಸೂಚಿಗಳನ್ನು ಸಡಿಲಿಸುವಂತೆ ರಾಜ್ಯ ಸರ್ಕಾರ ಕೇಂದ್ರಕ್ಕೆ ಮನವಿ ಸಲ್ಲಿಸಿದೆ. ಈ ಕುರಿತು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ.

### ಯುವ ಸಂಸತ್ತಿನಲ್ಲಿ ಸರ್ಕಾರಕ್ಕೆ ವಿದ್ಯಾರ್ಥಿಗಳ ತಿರುಗೇಟು । ರೈತರ ಸಂಕಷ್ಟದ ಬಗ್ಗೆ ಆಡಳಿತ-ಪ್ರತಿಪಕ್ಷದ ನಡುವೆ ಕಾವೇರಿದ ಚರ್ಚೆ । ಲಕ್ಷ್ಮೇಶ್ವರದಲ್ಲಿ ವಿಧಾನಸಭೆಯ ಮಾದರಿಯಲ್ಲಿ ಕಲಾಪ । ಬರಗಾಲ, ರೈತರ ಸಂಕಷ್ಟ, ಕುಡಿಯುವ ನೀರು, ಮೇವು ಪೂರೈಕೆ ಕುರಿತು ಆಡಳಿತ-ಪ್ರತಿಪಕ್ಷದ ನಡುವೆ ಜಟಾಪಟಿ

# ಬರ ಪರಿಹಾರಕ್ಕೆ 2,500 ರೂ. ಸಾಕೇ?



ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಬರಗಾಲದಿಂದ ಕಂಗೆಟ್ಟ ರೈತರಿಗೆ ಸರ್ಕಾರ ಘೋಷಿಸಿರುವ 2,500 ರೂ. ಪರಿಹಾರ ಸಾಕೇ? ರೈತರ ಪರ ಎಂದು ಹೇಳುವ ಸರ್ಕಾರ ನೀಡುವ ಪರಿಹಾರದ ಮೊತ್ತ ಇಷ್ಟೇನಾ? ರೈತರ ಸಂಕಷ್ಟಕ್ಕೆ ಸ್ಪಂದಿಸುವುದು ಹೇಗೆ? ಇಂತಹ ನೇರ ಪ್ರಶ್ನೆಗಳ ಮೂಲಕ ವಿದ್ಯಾರ್ಥಿಗಳೇ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡ ಅಪರೂಪದ ದೃಶ್ಯ ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಮಂಗಳವಾರ ಕಂಡುಬಂತು.

ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಯುವ ಸಂಸತ್ತು ಚರ್ಚಾ ಸಭೆ ವಿಧಾನಸಭೆಯ ಅಧಿವೇಶನದ ಮಾದರಿಯಲ್ಲಿ ನಡೆಯಿತು. ಆಡಳಿತ ಪಕ್ಷ, ಪ್ರತಿಪಕ್ಷ, ಸಭಾಧ್ಯಕ್ಷರು, ಮುಖ್ಯಮಂತ್ರಿ ಹಾಗೂ ವಿವಿಧ ಖಾತೆಗಳ ಸಚಿವರ ಪಾತ್ರ ನಿರ್ವಹಿಸಿದ ವಿದ್ಯಾರ್ಥಿಗಳು ರಾಜ್ಯದ ಬರ ಪರಿಸ್ಥಿತಿ, ರೈತರ ಸಂಕಷ್ಟ, ಕುಡಿಯುವ ನೀರಿನ ಸಮಸ್ಯೆ ಮತ್ತು ಜಾನುವಾರುಗಳಿಗೆ ಮೇವು ಪೂರೈಕೆಯಂತಹ ಜನಜೀವನಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಗಂಭೀರ ಚರ್ಚೆ ನಡೆಸಿದರು.

ಬರ ಪರಿಹಾರದ ಮೊತ್ತದ ಬಗ್ಗೆ ಪ್ರತಿಪಕ್ಷದ ವಿದ್ಯಾರ್ಥಿಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ರೈತರ ಪರ ಎಂದು ಹೇಳುವ ಸರ್ಕಾರ ಅಲ್ಪ ಮೊತ್ತದ ಪರಿಹಾರ ನೀಡುವ ಮೂಲಕ ಅನ್ನದಾತರನ್ನು ಅವಮಾನಿಸಿದೆ ಎಂದು ಟೀಕಿಸಿದರು. ಇದಕ್ಕೆ ಉತ್ತರಿಸಿದ ಮುಖ್ಯಮಂತ್ರಿ ಹಾಗೂ ಕೃಷಿ ಸಚಿವರ ಪಾತ್ರದಲ್ಲಿದ್ದ ವಿದ್ಯಾರ್ಥಿಗಳು, ರೈತರ ನೋವಿಗೆ ಸರ್ಕಾರ ಸ್ಪಂದಿಸುತ್ತಿದೆ. ಬರ ನಿರ್ವಹಣೆಗೆ ಕೇಂದ್ರ ಸರ್ಕಾರ ಹೆಚ್ಚಿನ ಅನುದಾನ ನೀಡಬೇಕು ಎಂದು ಸಮರ್ಥಿಸಿಕೊಂಡರು.

**ಪ್ರಶ್ನೆಗಳ ಸುರಿಮಳೆ, ಸಮರ್ಥನೆಯ ಉತ್ತರ**

ವಿಧಾನಸಭೆಯ ಪ್ರಶ್ನೋತ್ತರ ಕಲಾಪದ ಮಾದರಿಯಲ್ಲಿ ನಡೆದ ಚರ್ಚೆಯಲ್ಲಿ ಪ್ರತಿಪಕ್ಷದ ವಿದ್ಯಾರ್ಥಿಗಳು ವಿವಿಧ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಸರ್ಕಾರವನ್ನು ಪ್ರಶ್ನಿಸಿದರು. ಆಡಳಿತ ಪಕ್ಷದ ವಿದ್ಯಾರ್ಥಿಗಳು ಸರ್ಕಾರದ ಕ್ರಮಗಳನ್ನು ಸಮರ್ಥಿಸಿಕೊಂಡರು. ಸಭಾಧ್ಯಕ್ಷರ ಪಾತ್ರ ನಿರ್ವಹಿಸಿದ ವಿದ್ಯಾರ್ಥಿ ಕಲಾಪವನ್ನು ಶಿಸ್ತಿನಿಂದ ನಡೆಸಿಕೊಟ್ಟರು. ಸದನದ ವಾದ-ಪ್ರತಿವಾದಗಳು ನೈಜ ವಿಧಾನಸಭೆಯ ಕಲಾಪವನ್ನು ನೆನಪಿಸುವಂತಿದ್ದವು.

ರಾಜ್ಯದಲ್ಲಿ ಮಳೆಯ ಕೊರತೆಯಿಂದ ಉಂಟಾಗಿರುವ ಬರ ಪರಿಸ್ಥಿತಿ, ಕೃಷಿ ಚಟುವಟಿಕೆಗಳ ಮೇಲಿನ ಪರಿಣಾಮ, ರೈತರಿಗೆ ಪರಿಹಾರ, ಕುಡಿಯುವ ನೀರಿನ ಸಮಸ್ಯೆ ನಿವಾರಣೆ ಹಾಗೂ ಜಾನುವಾರುಗಳಿಗೆ ಮೇವು ಒದಗಿಸುವ ಕುರಿತು ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು. ಆರಂಭದಲ್ಲಿ ಇತ್ತೀಚೆಗೆ ನಿಧನರಾದ ಗಣ್ಯರಿಗೆ ಸಂತಾಪ ಸೂಚಿಸಲಾಯಿತು.

**ಪ್ರಜಾಪ್ರಭುತ್ವದ ಪಾಠಕ್ಕೆ ಪ್ರಾಯೋಗಿಕ ವೇದಿಕೆ**

ಯುವ ಸಂಸತ್ತು ವಿದ್ಯಾರ್ಥಿಗಳಿಗೆ ಕೇವಲ ಭಾಷಣದ ಕಾರ್ಯಕ್ರಮವಾಗದೆ, ಪ್ರಜಾಪ್ರಭುತ್ವದ ಕಾರ್ಯವೈಖರಿ, ಜನಪ್ರತಿನಿಧಿಗಳ ಜವಾಬ್ದಾರಿ, ಆಡಳಿತ ಮತ್ತು ಪ್ರತಿಪಕ್ಷಗಳ ಪಾತ್ರ ಹಾಗೂ ಸಾರ್ವಜನಿಕ ಸಮಸ್ಯೆಗಳ ಕುರಿತು ಚರ್ಚಿಸುವ ಪ್ರಕ್ರಿಯೆಯನ್ನು ಪ್ರಾಯೋಗಿಕವಾಗಿ ತಿಳಿಯಲು ಅವಕಾಶ ಕಲ್ಪಿಸಿತು.

ಕಾರ್ಯಕ್ರಮವನ್ನು ಗ್ರೇಡ್-2 ತಹಸೀಲ್ದಾರ್ ಮಂಜುನಾಥ ಅಮಾಸಿ ಉದ್ಘಾಟಿಸಿದರು. ತಾಲೂಕು ಪಂಚಾಯಿತಿ ಇಒ ಮಂಜುಳಾ ಹಕಾರಿ, ಬಿಇಒ ಶಿವರಾಜ ಸೀಮಿಕೇರಿ, ಸಮಾಜ ಕಲ್ಯಾಣ ಇಲಾಖೆಯ ಮುತ್ತಣ್ಣ ಸಂಕನೂರ, ಕೃಷ್ಣಪ್ಪ ಧರ್ಮರ, ಬಿ.ಎಸ್. ಹಡಪದ, ಎಂ.ಬಿ. ಇಟಗಿ, ಸೀಮಾ ಮಡಿವಾಳರ, ರೇಣುಕಾ ಎಚ್., ಸಿದ್ದಪ್ಪ ಕಳಸಣ್ಣವರ, ಶಿಕ್ಷಣ ಸಂಯೋಜಕ ಆರ್.ಬಿ. ಜೋಶಿ, ಕ್ಷೇತ್ರ ಸಮನ್ವಯಾಧಿಕಾರಿ ಎಸ್.ಕೆ. ಹವಾಲ್ದಾರ ಹಾಗೂ ಮಂಜುನಾಥ ಕೊಕ್ಕರಗುಂದಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

**ಯುವ ಸಂಸತ್ತು ಪ್ರಜಾಪ್ರಭುತ್ವದ ಪಾಠಶಾಲೆ**

ರೈತರ ಸಂಕಷ್ಟ, ಬರಗಾಲ ಹಾಗೂ ಕುಡಿಯುವ ನೀರಿನಂತಹ ಜನರ ಸಮಸ್ಯೆಗಳ ಬಗ್ಗೆ ಚರ್ಚಿಸುವ ಮೂಲಕ ವಿದ್ಯಾರ್ಥಿಗಳು ಪ್ರಜಾಪ್ರಭುತ್ವದ ಮೌಲ್ಯ ಮತ್ತು ಆಡಳಿತದ ಜವಾಬ್ದಾರಿಯನ್ನು ಅರಿತುಕೊಳ್ಳಲು ಯುವ ಸಂಸತ್ತು ಉತ್ತಮ ವೇದಿಕೆಯಾಯಿತು.

## ಗದಗ ಜಿಲ್ಲಾ ಜೂನಿಯರ್ ಬಾಲಕರ ಕಬಡ್ಡಿ ತಂಡ ಬೆಂಗಳೂರಿಗೆ



ವಿಜಯಸಾಕ್ಷಿ ಸುದ್ದಿ, ಗದಗ

ಬೆಂಗಳೂರಿನಲ್ಲಿ ಅಕ್ಟೋಬರ್ 14ರಂದು ನಡೆಯಲಿರುವ ಜೂನಿಯರ್ ರಾಜ್ಯಮಟ್ಟದ ಬಾಲಕರ ಕಬಡ್ಡಿ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಗದಗ ಜಿಲ್ಲಾ ತಂಡ ಅ.13ರಂದು ಪ್ರಯಾಣ ಬೆಳೆಸಿದೆ.

ಜಿಲ್ಲೆಯಿಂದ ಆಯ್ಕೆ ಪ್ರಕ್ರಿಯೆಯಲ್ಲಿ 81 ಬಾಲಕರು ಭಾಗವಹಿಸಿದ್ದು, ಆಯ್ಕೆ ಸಮಿತಿ 24 ಆಟಗಾರರನ್ನು ಜಿಲ್ಲಾ ತಂಡಕ್ಕೆ ಆಯ್ಕೆ ಮಾಡಿದೆ.

ಆಯ್ಕೆ ಸಮಿತಿ ಸದಸ್ಯರಾದ ಎಚ್.ವಿ. ಬೂದಣ್ಣ, ಶ್ರೀಕಾಂತ, ರಂಜಾನ್, ಎಸ್.ಡಿ. ಮಾದರ, ಪ್ರದಾನಿ ಮುತ್ತು ಹಾಗೂ ಮಾಲತೇಶ ಪೂಜಾರ ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಈದ್ಗಾ ಕಮಿಟಿ ಉಪಾಧ್ಯಕ್ಷ ಅನ್ವರಸಾಬ ಈಟಿ, ಶಫಿ ಸೇರಿದಂತೆ ಹಲವು ಹಿರಿಯರು ಉಪಸ್ಥಿತರಿದ್ದರು. ಗದಗ ಅಮೆಚೂರ್ ಕಬಡ್ಡಿ ಸಂಸ್ಥೆ ವತಿಯಿಂದ ಅನ್ವರಸಾಬ ಈಟಿ ಅವರನ್ನು ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಅನ್ವರಸಾಬ ಈಟಿ, ಆಟಗಾರರಿಗೆ ಮೈದಾನದ ಸೌಲಭ್ಯ ಹಾಗೂ ಅಗತ್ಯ ಕ್ರೀಡಾ ಸಾಮಗ್ರಿಗಳನ್ನು ಒದಗಿಸಲು ಸಹಕರಿಸುವುದಾಗಿ ಭರವಸೆ ನೀಡಿದರು. ಶಫಿ ನವಲಗುಂದ ಅವರು ಬಾಲಕ ಮತ್ತು ಬಾಲಕಿಂಮರ ಕಬಡ್ಡಿ ಟೂರ್ನಿ ಆಯೋಜನೆ ಹಾಗೂ ತರಬೇತಿ ಶಿಬಿರ ನಡೆಸಲು ಪ್ರಯತ್ನಿಸುವುದಾಗಿ ತಿಳಿಸಿದರು.

ಮೈದಾನ ಒದಗಿಸಿದ ಈದ್ಗಾ ಕಮಿಟಿಯ ಸದಸ್ಯರಿಗೆ ಗದಗ ಜಿಲ್ಲಾ ಅಮೆಚೂರ್ ಕಬಡ್ಡಿ ಸಂಸ್ಥೆಯ ಪರವಾಗಿ ಸಹದೇವ ಗಣಾಚಾರಿ ಧನ್ಯವಾದ ಅರ್ಪಿಸಿದರು. ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿದ ಆಟಗಾರರಿಗೆ ಉಪಾಹಾರದ ವ್ಯವಸ್ಥೆಯನ್ನೂ ಮಾಡಲಾಗಿತ್ತು.

ಬಸವರಾಜ ಬೆಟಗೇರಿ, ತಾಜುದ್ದೀನ್ ದುಮಾಲ, ರಾಯಚೂರಗೌಡ, ಸುನೀಲ ಹೊಸೂರ, ಬಸಯ್ಯ ಮುದೇನಗುಡಿ ಸೇರಿದಂತೆ ಹಲವು ಹಿರಿಯರು ಉಪಸ್ಥಿತರಿದ್ದರು.

## ರೈತರಿಗೆ ಉಚಿತ ಮೇವಿನ ಬೀಜ ವಿತರಣೆ



ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ

ಮುಂಗಾರು ಹಾಗೂ ಹಿಂಗಾರು ಮಳೆಯ ಕೊರತೆಯಿಂದ ಜಾನುವಾರುಗಳಿಗೆ ಮೇವು ಮತ್ತು ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಮುನ್ನೆಚ್ಚರಿಕೆ ವಹಿಸಿರುವ ಪಶುಪಾಲನಾ ಮತ್ತು ಪಶುವೈದ್ಯಕೀಯ ಇಲಾಖೆ, ನೀರಾವರಿ ಭೂಮಿ ಹೊಂದಿರುವ ಹಾಗೂ ಹಸು-ದನಕರು ಸಾಕಣೆ ಮಾಡುತ್ತಿರುವ ರೈತರಿಗೆ ಉಚಿತವಾಗಿ ಮೇವಿನ ಬೀಜ ವಿತರಿಸುತ್ತಿದೆ ಎಂದು ತಾಲೂಕು ಪಶುವೈದ್ಯಾಧಿಕಾರಿ ಡಾ. ಸೂರಪ್ಪ ಪೂಜಾರ್ ತಿಳಿಸಿದರು.

ತಾಲೂಕಿನ ಗ್ರಾಮಗಳಲ್ಲಿ ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆಯಾಗದಂತೆ ಅಗತ್ಯವಿರುವ ಕಡೆ ನೀರಿನ ತೊಟ್ಟಿಗಳನ್ನು ಸ್ಥಾಪಿಸಲು ಹಾಗೂ ಈಗಾಗಲೇ ಇರುವ ತೊಟ್ಟಿಗಳಲ್ಲಿ ನೀರಿನ ಸಂಗ್ರಹ ಕಾಯ್ದುಕೊಳ್ಳಲು ಗ್ರಾಮ ಪಂಚಾಯಿತಿಗಳಿಗೆ ಸೂಚಿಸಲಾಗಿದೆ ಎಂದರು.

ತಾಲೂಕಿನಲ್ಲಿ ಸುಮಾರು 45 ಸಾವಿರ ದನಕರುಗಳು ಹಾಗೂ 1.73 ಲಕ್ಷ ಕುರಿ-ಮೇಕೆಗಳಿವೆ. ಸದ್ಯ ರೈತರ ಬಳಿ 33 ವಾರಗಳಿಗೆ ಸಾಕಾಗುವಷ್ಟು ಮೇವು ಸಂಗ್ರಹವಿದೆ. ಭೂಮಿ ಇಲ್ಲದೆ ಜಾನುವಾರು ಸಾಕುತ್ತಿರುವ ರೈತರಿಗೆ ಮುಂದಿನ ದಿನಗಳಲ್ಲಿ ಸರಕಾರದಿಂದ ಮೇವು ಖರೀದಿಸಿ, ನಿಗದಿತ ದರದಲ್ಲಿ ವಿತರಿಸಲು ಇಲಾಖೆ ಕ್ರಿಯಾಯೋಜನೆ ರೂಪಿಸಿದೆ. ಬೇಸಿಗೆಯಲ್ಲಿ ಜಾನುವಾರುಗಳಿಗೆ ತೊಂದರೆಯಾಗದಂತೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ತಾಲೂಕಿನ 13 ಪಶು ಆಸ್ಪತ್ರೆಗಳಲ್ಲಿಯೂ ಉಚಿತ ಮೇವಿನ ಬೀಜ ಲಭ್ಯವಿದೆ. ಒಟ್ಟು ಐದು ಕೆ.ಜಿ. ತೂಕದ 539 ಪ್ಯಾಕೆಟ್‌ಗಳ ಮೇವಿನ ಬೀಜ ಸಂಗ್ರಹವಿದ್ದು, ಆಸಕ್ತ ರೈತರು ಆಧಾರ್ ಕಾರ್ಡ್, ಎಫ್‌ಐಡಿ ಸಂಖ್ಯೆ, ನೀರಾವರಿ ಭೂಮಿಯ ಪಹಣಿ ಹಾಗೂ ಮೊಬೈಲ್ ಸಂಖ್ಯೆ ನೀಡಿ ಪಡೆದುಕೊಳ್ಳಬಹುದು. ಮೇವಿನ ಬೆಳೆ ಬೆಳೆದ ಬಳಿಕ ಜಿಪಿಎಸ್ ಫೋಟೋ ತೆಗೆದು ಇಲಾಖೆಗೆ ಸಲ್ಲಿಸುವುದು ಕಡ್ಡಾಯ ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಅಧಿಕಾರಿಗಳಾದ ಡಾ. ಅಜ್ಜಯ್ಯ, ರಾಘವೇಂದ್ರ ಹಾಗೂ ರೈತರಾದ ಪಿಂಜಾರ್ ಹೆಗ್ಡಾಳ್, ಪರಶುರಾಮ, ರಾಮಪ್ಪ ರಾಮನಗರ, ಎಂಬಿ ಕಾಲೋನಿಯ ದೇವಿಂದ್ರಪ್ಪ, ಮಂಜಮ್ಮ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಶ್ರಮದಾನದಿಂದ ಸೇವಾ ಮನೋಭಾವ ಬೆಳೆಸಿಕೊಳ್ಳಿ



ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವದ ಜತೆಗೆ ಸಾಮಾಜಿಕ ಜವಾಬ್ದಾರಿ, ಶಿಸ್ತು, ಸಹಕಾರ ಹಾಗೂ ನಾಯಕತ್ವ ಗುಣಗಳನ್ನು ಬೆಳೆಸುವಲ್ಲಿ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಮಹತ್ವದ ಪಾತ್ರ ವಹಿಸುತ್ತದೆ ಎಂದು ರಾಜ್ಯ ಸಂಯೋಜನಾಧಿಕಾರಿ ಶಿವಮಾದಯ್ಯ ಕೆ.ಎನ್. ಹೇಳಿದರು.

ನರೇಗಲ್ಲದ ಶ್ರೀ ಅನ್ನದಾನೇಶ್ವರ ಪದವಿಪೂರ್ವ ಮಹಾವಿದ್ಯಾಲಯದ ವತಿಯಿಂದ ಮಾರನಬಸರಿ ಗ್ರಾಮದಲ್ಲಿ ನಡೆಯುತ್ತಿರುವ ವಾರ್ಷಿಕ ವಿಶೇಷ ಶಿಬಿರದ ಎರಡನೇ ದಿನ ಭೇಟಿ ನೀಡಿ, ಶಿಬಿರಾರ್ಥಿಗಳಿಗೆ ಎನ್‌ಎಸ್‌ಎಸ್‌ನ ಗುರಿ ಮತ್ತು ಉದ್ದೇಶಗಳ ಕುರಿತು ಅವರು ಮಾರ್ಗದರ್ಶನ ನೀಡಿದರು.

ವಿದ್ಯಾರ್ಥಿಗಳು ಪಠ್ಯಪುಸ್ತಕಗಳ ಅಧ್ಯಯನಕ್ಕೆ ಸೀಮಿತವಾಗದೆ, ಸಮಾಜದೊಂದಿಗೆ ಬೆರೆತು ಜನರ ಸಮಸ್ಯೆಗಳನ್ನು ಅರಿಯಬೇಕು. ಸಂಕಷ್ಟದಲ್ಲಿರುವವರಿಗೆ ನೆರವಾಗುವ ಮನೋಭಾವ ಬೆಳೆಸಿಕೊಂಡು, ಗ್ರಾಮಗಳ ಅಭಿವೃದ್ಧಿ ಹಾಗೂ ಸಾಮಾಜಿಕ ಬದಲಾವಣೆಗೆ ಕೊಡುಗೆ ನೀಡಬೇಕು.

ಸೇವೆ ಒಂದು ದಿನದ ಚಟುವಟಿಕೆಯಾಗದೆ, ಬದುಕಿನ ಅವಿಭಾಜ್ಯ ಅಂಗವಾಗಬೇಕು ಎಂದು ತಿಳಿಸಿದರು.

ಶ್ರಮದಾನವು ದುಡಿಮೆಯ ಗೌರವ, ಒಗ್ಗಟ್ಟು ಮತ್ತು ಸಹಕಾರದ ಮಹತ್ವವನ್ನು ಕಲಿಸುತ್ತದೆ. ಸ್ವಚ್ಛತೆ, ಶಿಸ್ತು ಹಾಗೂ ಸಾರ್ವಜನಿಕ ಆಸ್ತಿಯ ಸಂರಕ್ಷಣೆಯಂತಹ ಮೌಲ್ಯಗಳನ್ನು ಇಂತಹ ಶಿಬಿರಗಳ ಮೂಲಕ ಪ್ರಾಯೋಗಿಕವಾಗಿ ಕಲಿಯಬಹುದು.

ಗ್ರಾಮೀಣ ಜನರೊಂದಿಗೆ ಬೆರೆತು ಕೆಲಸ ಮಾಡುವುದರಿಂದ ಬದುಕಿನ ವಾಸ್ತವಿಕತೆ ಅರಿಯಲು ಹಾಗೂ ಜವಾಬ್ದಾರಿಯುತ ನಾಗರಿಕರಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ ಎಂದರು.

ಶಿಬಿರದ ಎರಡನೇ ದಿನ ಶಿಬಿರಾರ್ಥಿಗಳು ಶ್ರಮದಾನದಲ್ಲಿ ಪಾಲ್ಗೊಂಡು ಸೇವೆ ಮತ್ತು ಸಹಕಾರದ ಮಹತ್ವವನ್ನು ಅನುಭವದ ಮೂಲಕ ಅರಿತುಕೊಂಡರು.

ಈ ಸಂದರ್ಭದಲ್ಲಿ ಗದಗ ಜಿಲ್ಲಾ ನೋಡಲ್ ಅಧಿಕಾರಿ ಶ್ರೀನಿವಾಸ ಬಡಿಗೇರ, ಕಾರ್ಯಕ್ರಮಾಧಿಕಾರಿ ಎಂ.ಎಸ್. ಹೊನ್ನವಾಡ, ಸಹ ಕಾರ್ಯಕ್ರಮಾಧಿಕಾರಿ ಎಂ.ಬಿ. ಸರ್ಜಾಪುರ, ಬಿ ಘಟಕದ ಕಾರ್ಯಕ್ರಮಾಧಿಕಾರಿ ಶರಣಯ್ಯ ಭಾಗಲತ್ತಿ, ಸಹ ಕಾರ್ಯಕ್ರಮಾಧಿಕಾರಿಗಳಾದ ಮಾರುತಿ ಹೂಗಾರ ಮತ್ತು ಭುವನೇಶ್ವರಿ ವಿ. ಗೌಡ್ರು ಸೇರಿದಂತೆ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

## ದಸರಾ ಕ್ರೀಡಾಕೂಟ ನಾಡಿನ ಹೆಮ್ಮೆ ಅಭಿನವ ಶ್ರೀ ಗವಿಸಿದ್ದೇಶ್ವರ ಸ್ವಾಮೀಜಿ



ವಿಜಯಸಾಕ್ಷಿ ಸುದ್ದಿ, ಗದಗ

ನಾಡಹಬ್ಬ ಮೈಸೂರು ದಸರಾ ಅಂಗವಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯೋಜಿಸಿರುವ ಸಿ.ಎಂ. ಕಪ್ ದಸರಾ ಕ್ರೀಡಾಕೂಟದಲ್ಲಿ ರಾಜ್ಯದ 4,500ಕ್ಕೂ ಹೆಚ್ಚು ಕ್ರೀಡಾಪಟುಗಳು ಪಾಲ್ಗೊಂಡು ನಾಡಿನ ಕೀರ್ತಿಯನ್ನು ದೇಶಾದ್ಯಂತ ಪಸರಿಸುತ್ತಿರುವುದು ಹೆಮ್ಮೆಯ ಸಂಗತಿ ಎಂದು ಈ ವರ್ಷದ ಮೈಸೂರು ದಸರಾ ಉದ್ಘಾಟಕರಾದ ಕೊಪ್ಪಳ ಗವಿಮಠದ ಅಭಿನವ ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಗಳು ಹೇಳಿದರು.

ಮೈಸೂರಿನ ಚಾಮುಂಡಿ ವಿಹಾರ ಜಿಲ್ಲಾ ಕ್ರೀಡಾಂಗಣಕ್ಕೆ ಭೇಟಿ ನೀಡಿದ ಅವರು, ಒಳಾಂಗಣ ಕ್ರೀಡಾಂಗಣದಲ್ಲಿ ಬೆಂಗಳೂರು ಗ್ರಾಮಾಂತರ ಮತ್ತು ಕಲಬುರಗಿ ವಿಭಾಗಗಳ ನಡುವೆ ನಡೆದ ವಾಲಿಬಾಲ್ ಪಂದ್ಯಾವಳಿಯನ್ನು ವೀಕ್ಷಿಸಿದರು. ಬಳಿಕ ಅಥ್ಲೆಟಿಕ್ಸ್ ಸಿಂಥೆಟಿಕ್ ಅಂಕಣದಲ್ಲಿ ನಡೆದ ಮಹಿಳೆಯರ ಹಾಗೂ ಪುರುಷರ 4ಥ400 ಮೀಟರ್ ರಿಲೇ ಸ್ಪರ್ಧೆಗಳನ್ನು ವೀಕ್ಷಿಸಿ ವಿಜೇತರಿಗೆ ಬಹುಮಾನ ವಿತರಿಸಿದರು.

ನಂತರ ಕ್ರೀಡಾಂಗಣದ ಆವರಣದಲ್ಲಿರುವ ಕುಸ್ತಿ ಅಖಾಡಕ್ಕೆ ಭೇಟಿ ನೀಡಿ, ಮಕ್ಕಳ ಕುಸ್ತಿ ಪಂದ್ಯಗಳನ್ನು ವೀಕ್ಷಿಸಿ ಸಂತಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಗದಗದ ಚಿಕ್ಕನಕೊಪ್ಪ ಮಠದ ಶಿವಶಾಂತ ವೀರಶ್ರೀಗಳು, ಇಲಾಖೆಯ ಜಂಟಿ ನಿರ್ದೇಶಕರು ಹಾಗೂ ದಸರಾ ಕ್ರೀಡಾ ಉಪಸಮಿತಿ ಕಾರ್ಯಾಧ್ಯಕ್ಷ ಡಾ. ಜಿತೇಂದ್ರಶೆಟ್ಟಿ, ಜಂಟಿ ನಿರ್ದೇಶಕ ಸುಭಾಷ್ ಚಂದ್ರ, ಉಪನಿರ್ದೇಶಕ ಎಂ.ಸಿ. ರಮೇಶ್, ಸಹಾಯಕ ನಿರ್ದೇಶಕರಾದ ಮಂಜುನಾಥಸ್ವಾಮಿ, ಡಾ. ಶರಣು ಗೋಗೇರಿ, ವಿಠ್ಠಲ್ ಜಾಬ್ಗೌಡರ್, ಇರೇಶ್ ನಾಯಕ್, ತರಬೇತುದಾರರಾದ ವಿಜಯಕೃಷ್ಣ ಮತ್ತು ವಿನೋದ್ ಕುಮಾರ್ ಸೇರಿದಂತೆ ಹಲವು ಅಧಿಕಾರಿಗಳು, ತರಬೇತುದಾರರು ಹಾಗೂ ಸಾವಿರಾರು ಕ್ರೀಡಾಪಟುಗಳು ಉಪಸ್ಥಿತರಿದ್ದರು.

## ಕಾರ್ಮಿಕ ಮುಖಂಡ ನಿಂಗಪ್ಪ ಕಟ್ಟಿಮನಿಗೆ ಗೌರವ ಡಾಕ್ಟರೇಟ್



ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿಯ ಸಾಮಾಜಿಕ ಕಾರ್ಯಕರ್ತ ಹಾಗೂ ಕಾರ್ಮಿಕ ಮುಖಂಡ ನಿಂಗಪ್ಪ ಶಂಕ್ರಪ್ಪ ಕಟ್ಟಿಮನಿ ಅವರಿಗೆ ಯುನಿವರ್ಸ್ ಕಲ್ಚರ್ ಎಜುಕೇಷನ್ ಪ್ರೊಟೆಕ್ಷನ್ ಕಮಿಷನ್ ಇಂಡಿಯಾ ವತಿಯಿಂದ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗಿದೆ.

ಬೆಂಗಳೂರಿನ ಜಯನಗರದ ಶ್ರೀ ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪದಲ್ಲಿ ಸೋಮವಾರ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನ್ಯಾಯವಾದಿ ವೀಣಾ ರಾವ್, ನಿವೃತ್ತ ಪೊಲೀಸ್ ಅಧಿಕಾರಿ ಡಾ. ರವೀಂದ್ರನಾಥ ಕೆ., ರಾಷ್ಟ್ರೀಯ ಪ್ರಶಸ್ತಿ ವಿಜೇತ ಡಾ. ಅಶೋಕ ಕಾಳೆ ಸೇರಿದಂತೆ ಗಣ್ಯರು ನಿಂಗಪ್ಪ ಕಟ್ಟಿಮನಿ ಅವರಿಗೆ ಪದಕದೊಂದಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಿ ಅಭಿನಂದಿಸಿದರು.

2020-21ರಲ್ಲಿ ಕಾರ್ಯಾಧ್ಯಕ್ಷರಾಗಿ ಹಾಗೂ 2022-23ರಲ್ಲಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಕಾರ್ಮಿಕ ಟ್ರೇಡ್ ಯೂನಿಯನ್‌ನ ಎಐಎಲ್‌ಸಿ ಅಧ್ಯಕ್ಷರಾಗಿ, ಭಾರತೀಯ ಶ್ರಮಿಕ ಕಾಮಗಾರಿ ಕರ್ಮಚಾರಿ ಮಹಾಸಂಘದ ಗದಗ ಜಿಲ್ಲಾ ಅಧ್ಯಕ್ಷರಾಗಿ ಹಾಗೂ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದಾರೆ.

ಗೌರವ ಡಾಕ್ಟರೇಟ್ ಪಡೆದ ನಿಂಗಪ್ಪ ಕಟ್ಟಿಮನಿ ಅವರನ್ನು ಗದಗದ ಕಾರ್ಮಿಕ ಮುಖಂಡರಾದ ಮೊಹ್ಮದ್ ಇರ್ಫಾನ್ ಡಂಬಳ, ಎಸ್.ಪಿ. ಕರಿಸೋಮನಗೌಡ್ರ, ಭೀಮಪ್ಪ ಪೂಜಾರ, ಮೊಹ್ಮದ್ ಇಸೂಫ್ ಬೇಪಾರಿ, ಖಾಜೇಸಾಬ ಗಬ್ಬೂರ ಸೇರಿದಂತೆ ಹಲವರು ಅಭಿನಂದಿಸಿದ್ದಾರೆ.

## ಸಣ್ಣ ಸುದ್ದಿಗಳು

### ಮೈಸೂರು ದಸರಾ ಜನಪದ ಕಾವ್ಯಗೋಷ್ಠಿಗೆ ವೀರಣ್ಣ ಅಂಗಡಿ ಆಯ್ಕೆ

ವಿಜಯಸಾಕ್ಷಿ ಸುದ್ದಿ, ಗದಗ



ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ನಡೆಯಲಿರುವ ಜನಪದ ಕಾವ್ಯಗೋಷ್ಠಿಗೆ ಗದಗ ತಾಲೂಕಿನ ಅಡವಿಸೋಮಾಪುರ ಗ್ರಾಮದ ಜನಪದ ಕಲಾವಿದ ವೀರಣ್ಣ ಚನ್ನಪ್ಪ ಅಂಗಡಿ ಆಯ್ಕೆಯಾಗಿದ್ದಾರೆ.

ಮೈಸೂರಿನ ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿ.ಎಂ.ಶ್ರೀ ಸಭಾಂಗಣದಲ್ಲಿ ನಡೆಯಲಿರುವ ಗೋಷ್ಠಿಯಲ್ಲಿ ವೀರಣ್ಣ ಅಂಗಡಿ ಅವರು ಲಾವಣಿ ಪದ ಕಲಾ ಪ್ರದರ್ಶನ ನೀಡಲಿದ್ದಾರೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಗೋಷ್ಠಿಯನ್ನು ಪ್ರಖ್ಯಾತ ಜಾನಪದ ವಿದ್ವಾಂಸ ಡಾ. ಪಿ.ಕೆ. ರಾಜಶೇಖರ ಉದ್ಘಾಟಿಸಲಿದ್ದಾರೆ. ಪ್ರಖ್ಯಾತ ಸಾಹಿತಿ ಹಾಗೂ ಗ್ರಂಥಾಲಯಕ್ಕೆ ಸಂಬಂಧಿಸಿದ ಸಗಟು ಖರೀದಿ ಸಮಿತಿಯ ಡಾ. ರಾಜಪ್ಪ ದಳವಾಯಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ.

ಮೈಸೂರು ದಸರಾ ಮಹೋತ್ಸವದಂತಹ ಪ್ರತಿಷ್ಠಿತ ವೇದಿಕೆಯಲ್ಲಿ ಗದಗ ಜಿಲ್ಲೆಯನ್ನು ಪ್ರತಿನಿಧಿಸಿ ಲಾವಣಿ ಪದ ಕಲಾ ಪ್ರದರ್ಶನ ನೀಡಲು ಆಯ್ಕೆಯಾಗಿರುವ ವೀರಣ್ಣ ಅಂಗಡಿ ಅವರಿಗೆ ಜಿಲ್ಲೆಯ ಜನಪದ ಕಲಾವಿದರು ಶುಭ ಹಾರೈಸಿದ್ದಾರೆ.

### ಕನ್ಯಕಾಪರಮೇಶ್ವರಿಗೆ ರೇಣುಕಾದೇವಿ ಅಲಂಕಾರ



ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಐತಿಹಾಸಿಕ ಪ್ರಸಿದ್ಧ ನಗರೇಶ್ವರ ದೇವಸ್ಥಾನದಲ್ಲಿ ನಡೆಯುತ್ತಿರುವ 51ನೇ ವರ್ಷದ ಶ್ರೀ ಶರನ್ನವರಾತ್ರಿ ಉತ್ಸವದ ಮೂರನೇ ದಿನವಾದ ಮಂಗಳವಾರ, ಆರ್ಯವೈಶ್ಯ ಸಮುದಾಯದ ಕುಲದೇವತೆ ಶ್ರೀ ಕನ್ಯಕಾಪರಮೇಶ್ವರಿ ದೇವಿಗೆ ಶ್ರೀ ಮಾತಾ ರೇಣುಕಾ ದೇವಿಯ ವಿಶೇಷ ಅಲಂಕಾರ ಮಾಡಲಾಯಿತು. ಸಾಂಪ್ರದಾಯಿಕ ಬೋರಮಾಳ ಸರದೊಂದಿಗೆ ಕಂಗೊಳಿಸಿದ ದೇವಿಯ ಅಲಂಕಾರ ಭಕ್ತರ ಗಮನ ಸೆಳೆಯಿತು.

### ಗ್ರಾಮ ದೇವತೆ ದೇವಸ್ಥಾನದಲ್ಲಿ 47ನೇ ವರ್ಷದ ದೇವಿ ಪುರಾಣ ಆರಂಭ



ವಿಜಯಸಾಕ್ಷಿ ಸುದ್ದಿ, ಗದಗ

ಚಿದಾನಂದ ಅವಧೂತರು ರಚಿಸಿದ ದೇವಿ ಪುರಾಣವು ಮನುಷ್ಯನ ಜೀವನಕ್ಕೆ ಮಾರ್ಗದರ್ಶನ ನೀಡುವ ಪುರಾಣವಾಗಿದೆ. ನವರಾತ್ರಿ ಸಂದರ್ಭದಲ್ಲಿ ದೇವಿಯ ಚರಿತ್ರೆಯನ್ನು ಶ್ರದ್ಧಾ ಭಕ್ತಿಯಿಂದ ಆಲಿಸಿ, ಅದರ ಸಂದೇಶವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಅಲ್ಲಮಪ್ರಭುದೇವರ ಮಠದ ಸಿದ್ಧಲಿಂಗೇಶ್ವರ ಸ್ವಾಮೀಜಿ ಹೇಳಿದರು.

ಗ್ರಾಮದೇವತೆ ದೇವಸ್ಥಾನದಲ್ಲಿ ನವರಾತ್ರಿ ಅಂಗವಾಗಿ ಹಮ್ಮಿಕೊಂಡಿರುವ 47ನೇ ವರ್ಷದ ದೇವಿ ಪುರಾಣ ಕಾರ್ಯಕ್ರಮಕ್ಕೆ ಘಟಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು. ಮನುಷ್ಯನಲ್ಲಿರುವ ಅರಿಷಡ್ವರ್ಗಗಳನ್ನು ನಿಯಂತ್ರಿಸುವ ಮಾರ್ಗವನ್ನು ದೇವಿ ಪುರಾಣದಲ್ಲಿ ಹಲವು ದೃಷ್ಟಾಂತಗಳ ಮೂಲಕ ವಿವರಿಸಲಾಗಿದೆ. ಅವುಗಳನ್ನು ಅರಿತು ಜೀವನದಲ್ಲಿ ಪಾಲಿಸಬೇಕು ಎಂದು ಸಲಹೆ ನೀಡಿದರು.

ಗದಗ ವೀರೇಶ್ವರ ಪುಣ್ಯಾಶ್ರಮದ ವಿಶ್ವನಾಥ ಶಾಸ್ತ್ರಿಗಳು ಪುರಾಣ ಪ್ರವಚನ ಆರಂಭಿಸಿದರು. ಷಡಕ್ಷರಯ್ಯ ಬದ್ನಿಮಠ ಅವರು ಪಠಣಕ್ಕೆ ಚಾಲನೆ ನೀಡಿದರು. ಶಂಕ್ರಪ್ಪ ಬಣವಿ, ಮಲ್ಲಪ್ಪ ಕಲ್ಲೂರ ಹಾಗೂ ಬಸನಗೌಡ ಪಾಟೀಲ ಸಂಗೀತ ಸೇವೆ ಸಲ್ಲಿಸಿದರು.

ದೇವೇಂದ್ರಪ್ಪ ಬಡಿಗೇರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕುಬೇರಗೌಡ ಪಾಟೀಲ ಹಾಗೂ ಬಸವರಾಜ ಭೂಮಣ್ಣವರ ವೇದಿಕೆಯಲ್ಲಿದ್ದರು. ಪ್ರಕಾಶ ಅರಹುಣಶಿ ಸ್ವಾಗತಿಸಿದರು. ನಿವೃತ್ತ ಶಿಕ್ಷಕ ಅಶೋಕ ಬೂದಿಹಾಳ ನಿರೂಪಿಸಿದರು.

### ನಿಧನ
### ಈರಮ್ಮ ಹಿರೇಮಠ



**ಲಕ್ಕುಂಡಿ:** ಇಲ್ಲಿನ ಬಜಾರ ರಸ್ತೆಯ ಗ್ರಾಮ ಪಂಚಾಯಿತಿ ಕಾರ್ಯಾಲಯದ ಸಮೀಪದ ನಿವಾಸಿ ಈರಮ್ಮ ಶಿವಲಿಂಗಯ್ಯ ಹಿರೇಮಠ (101) ಬುಧವಾರ ನಿಧನರಾದರು. ಮೃತರು ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಸಣ್ಣ ಸುದ್ದಿಗಳು

## ಅ. 16ರಂದು ಹುಲಿಗೆಮ್ಮ ದೇವಿ ದೇವಸ್ಥಾನದ 5ನೇ ವರ್ಷದ ವಾರ್ಷಿಕೋತ್ಸವ



ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಇಟ್ಟಿಕೆರೆ ದಂಡೆಯ ಮೇಲಿರುವ ಪ್ರಸಿದ್ಧ ಉದ್ಭವಮೂರ್ತಿ ಶ್ರೀ ಆದಿಶಕ್ತಿ ಹುಲಿಗೆಮ್ಮ ದೇವಿ ದೇವಸ್ಥಾನದ 5ನೇ ವರ್ಷದ ವಾರ್ಷಿಕೋತ್ಸವ ಅ. 16ರ ಶುಕ್ರವಾರ ನಡೆಯಲಿದೆ.

ಅಂದು ಬೆಳಿಗ್ಗೆ 5 ಗಂಟೆಯಿಂದ ಹಾಲಿನ ಅಭಿಷೇಕ, ಪಂಚಾಮೃತ ಅಭಿಷೇಕ, ಸುಪ್ರಭಾತ, ದುರ್ಗಾ ಸಹಸ್ರನಾಮ ಪಠಣ ಹಾಗೂ 35ಕ್ಕೂ ಹೆಚ್ಚು ಜೋಗಮ್ಮರಿಗೆ ಪಡ್ಲಿಗೆ ತುಂಬುವ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ. ದೇವಿಗೆ ಬೃಹತ್ ಹೂವಿನ ಮಾಲೆ ಅರ್ಪಿಸಿ ವಿಶೇಷ ಅಲಂಕಾರ ಹಾಗೂ ಪೂಜೆ ನೆರವೇರಿಸಲಾಗುವುದು. ಅರ್ಚಕ ರಾಘವೇಂದ್ರ ಕ್ಷತ್ರಿಯ ಅವರ ನೇತೃತ್ವದಲ್ಲಿ ಧಾರ್ಮಿಕ ವಿಧಿವಿಧಾನಗಳು ನಡೆಯಲಿದ್ದು, ಬಳಿಕ ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿದೆ.

ಸಂಜೆ 6 ಗಂಟೆಗೆ ದೇವಸ್ಥಾನದ ಆವರಣದಲ್ಲಿ ಸೇವಾ ಕಾರ್ಯಕ್ರಮಕ್ಕೆ ಕೊಡುಗೆ ನೀಡಿದ ದಾನಿಗಳಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಶ್ರೀ ಆದಿಶಕ್ತಿ ಹುಲಿಗೆಮ್ಮ ದೇವಿ ದೇವಸ್ಥಾನದ ಜೀರ್ಣೋದ್ಧಾರ ಸೇವಾ ಸಮಿತಿಯ ಪದಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿ ವಾರ್ಷಿಕೋತ್ಸವವನ್ನು ಯಶಸ್ವಿಗೊಳಿಸಬೇಕೆಂದು ಪತ್ರಿಕಾ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

## ಸಂಕದಾಳದಲ್ಲಿ ಚರಂಡಿ ಅವ್ಯವಸ್ಥೆ: ಗ್ರಾಮಸ್ಥರ ಆಕ್ರೋಶ



ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತಾಲೂಕಿನ ಸಂಕದಾಳ ಗ್ರಾಮದಲ್ಲಿ ಚರಂಡಿ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದ್ದು, ಕೊಳಚೆ ನೀರು, ಮಣ್ಣು ಹಾಗೂ ಕಸಕಡ್ಡಿಗಳಿಂದ ಗಟಾರುಗಳು ತುಂಬಿಕೊಂಡಿವೆ. ನೀರು ಸರಾಗವಾಗಿ ಹರಿಯದೆ ದುರ್ವಾಸನೆ ಹರಡುತ್ತಿದ್ದು, ಗ್ರಾಮಸ್ಥರು ನಿತ್ಯ ನರಕಯಾತನೆ ಅನುಭವಿಸುವಂತಾಗಿದೆ.

ಪರಿಶಿಷ್ಟ ಜಾತಿಯ ಕಾಲೋನಿ ಸೇರಿದಂತೆ ಗ್ರಾಮದ ಪ್ರಮುಖ ಚರಂಡಿಗಳಲ್ಲಿ ಕೊಳಚೆ ನೀರು ನಿಂತಿದೆ. ಸೊಳ್ಳೆಗಳ ಕಾಟ ಹೆಚ್ಚಾಗಿದ್ದು, ಡೆಂಗ್ಯೂ, ಮಲೇರಿಯಾದಂತಹ ಸಾಂಕ್ರಾಮಿಕ ರೋಗಗಳ ಭೀತಿ ಎದುರಾಗಿದೆ. ಹಿರಿಯ ನಾಗರಿಕರು, ಗರ್ಭಿಣಿಯರು ಹಾಗೂ ಶಾಲಾ ಮಕ್ಕಳು ಇದೇ ಪರಿಸರದಲ್ಲಿ ಸಂಚರಿಸಬೇಕಾದ ಅನಿವಾರ್ಯತೆ ಎದುರಾಗಿದೆ.

ಚರಂಡಿ ಸ್ವಚ್ಛಗೊಳಿಸುವಂತೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಅನುದಾನವಿಲ್ಲ, ಮೇಲಧಿಕಾರಿಗಳಿಗೆ ಮನವಿ ಸಲ್ಲಿಸಿ ಎಂದು ಅಧಿಕಾರಿಗಳು ಉತ್ತರಿಸುತ್ತಿದ್ದಾರೆ ಎಂಬುದು ಗ್ರಾಮಸ್ಥರ ಆರೋಪ. ಇದರಿಂದ ಬೇಸತ್ತ ಗ್ರಾಮಸ್ಥರೇ ಚರಂಡಿ ಸ್ವಚ್ಛಗೊಳಿಸಲು ಮುಂದಾಗಿದ್ದಾರೆ.

ಇನ್ನೂ ಕೆಲವೇ ದಿನಗಳಲ್ಲಿ ಚರಂಡಿಗಳನ್ನು ಸ್ವಚ್ಛಗೊಳಿಸಿ, ಸೂಕ್ತ ದುರಸ್ತಿ ಕೈಗೊಳ್ಳದಿದ್ದರೆ ಗ್ರಾಮ ಪಂಚಾಯಿತಿ ಕಚೇರಿ ಮುಂದೆ ಉಗ್ರ ಪ್ರತಿಭಟನೆ ನಡೆಸುವುದಾಗಿ ಗ್ರಾಮಸ್ಥರು ಎಚ್ಚರಿಸಿದ್ದಾರೆ. ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯಿತಿ ಹಿರಿಯ ಅಧಿಕಾರಿಗಳು ತಕ್ಷಣ ಮಧ್ಯಪ್ರವೇಶಿಸಿ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಗ್ರಾಮದ ವಕೀಲ ಮೈಲಾರಪ್ಪ ಡಿ.ಎಚ್. ಆಗ್ರಹಿಸಿದ್ದಾರೆ.

### ಕರ್ತವ್ಯನಿಷ್ಠೆ, ಕಾರ್ಯಕ್ಷಮತೆಗೆ ಮನ್ನಣೆ | ಪಿಎಸ್‌ಐ ಐಶ್ವರ್ಯ ನಾಗರಾಳ ತಂಡದ ಸಾಧನೆಗೆ ಮೆಚ್ಚುಗೆ

# ರಾಜ್ಯದ ಟಾಪ್–10ರಲ್ಲಿ ನರೇಗಲ್ಲ ಠಾಣೆಗೆ ಸ್ಥಾನ



ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಕಾನೂನು ಸುವ್ಯವಸ್ಥೆಯ ಕಾವಲುಗಾರರಾಗಿ ಹಗಲಿರುಳು ದುಡಿಯುವ ಪೊಲೀಸರ ಕರ್ತವ್ಯನಿಷ್ಠೆಗೆ ರಾಜ್ಯಮಟ್ಟದಲ್ಲಿ ಮನ್ನಣೆ ದೊರೆತಿದೆ. ಗದಗ ಜಿಲ್ಲೆಯ ನರೇಗಲ್ಲ ಪೊಲೀಸ್ ಠಾಣೆ ರಾಜ್ಯದ ಅತ್ಯುತ್ತಮ ಕಾರ್ಯಕ್ಷಮತೆಯ ಪೊಲೀಸ್ ಠಾಣೆಗಳ ಪಟ್ಟಿಯಲ್ಲಿ ಸ್ಥಾನ ಪಡೆದು ಜಿಲ್ಲೆಯ ಗೌರವ ಹೆಚ್ಚಿಸಿದೆ. ಪಿಎಸ್‌ಐ ಐಶ್ವರ್ಯ ವಿಶ್ವನಾಥ್ ನಾಗರಾಳ ಅವರ ನೇತೃತ್ವದಲ್ಲಿ ಠಾಣೆಯ ಅಧಿಕಾರಿ ಮತ್ತು ಸಿಬ್ಬಂದಿ ನಡೆಸಿದ ಸಂಘಟಿತ ಪ್ರಯತ್ನಕ್ಕೆ ಈ ಮನ್ನಣೆ ಸಂದಿದೆ.

ಸಾರ್ವಜನಿಕರ ಸುರಕ್ಷತೆ, ಅಪರಾಧ ನಿಯಂತ್ರಣ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವ ಹೊಣೆ ಹೊತ್ತಿರುವ ಪೊಲೀಸರು ತಮ್ಮ ವೈಯಕ್ತಿಕ ಸಮಯವನ್ನೂ ಲೆಕ್ಕಿಸದೆ ಕರ್ತವ್ಯ ನಿರ್ವಹಿಸುತ್ತಾರೆ. ಹಬ್ಬ–ಹರಿದಿನಗಳಲ್ಲಿಯೂ ಕುಟುಂಬದಿಂದ ದೂರವಿದ್ದು ಜನರ ರಕ್ಷಣೆಗೆ ನಿಲ್ಲುವ ಸಿಬ್ಬಂದಿಯ ಪರಿಶ್ರಮಕ್ಕೆ ಇಂತಹ ಗುರುತಿಸುವಿಕೆ ಹೊಸ ಹುಮ್ಮಸ್ಸು ನೀಡುತ್ತದೆ.

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ ಪ್ರಕಟಿಸಿರುವ ಕಾರ್ಯಕ್ಷಮತೆಯ ಮೌಲ್ಯಮಾಪನದಲ್ಲಿ ರಾಜ್ಯದ ವಿವಿಧ ಠಾಣೆಗಳ ಕೆಲಸವನ್ನು ಹಲವು ಮಾನದಂಡಗಳ ಆಧಾರದಲ್ಲಿ ಪರಿಶೀಲಿಸಲಾಗಿದೆ. ದೂರುಗಳಿಗೆ ಸ್ಪಂದಿಸುವ ವೇಗ, ಕಾನೂನು ಸುವ್ಯವಸ್ಥೆ ನಿರ್ವಹಣೆ, ಅಪರಾಧ ನಿಯಂತ್ರಣ, ಪ್ರಕರಣಗಳ ವಿಲೇವಾರಿ ಮತ್ತು ಸಾರ್ವಜನಿಕ ಸೇವೆಯಲ್ಲಿನ ಕಾರ್ಯಕ್ಷಮತೆಯಂತಹ ಅಂಶಗಳು ಠಾಣೆಯ ಒಟ್ಟಾರೆ ಸಾಧನೆಯನ್ನು ನಿರ್ಧರಿಸುವಲ್ಲಿ ಪ್ರಮುಖವಾಗಿವೆ.

ಪೊಲೀಸ್ ಠಾಣೆಯ ಕೆಲಸವನ್ನು ಕೇವಲ ದಾಖಲಾದ ಪ್ರಕರಣಗಳ ಸಂಖ್ಯೆಯಿಂದ ಅಳೆಯಲು ಸಾಧ್ಯವಿಲ್ಲ. ಸಾರ್ವಜನಿಕ–ರಿಂದ ಬರುವ ದೂರುಗಳನ್ನು ಗಂಭೀರವಾಗಿ ಪರಿಗಣಿಸುವುದು, ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸುವುದು, ಕಾನೂನುಬದ್ಧ ಕ್ರಮ ಕೈಗೊಳ್ಳುವುದು ಹಾಗೂ ಜನರಲ್ಲಿ ಸುರಕ್ಷತೆಯ ಭಾವನೆ ಮೂಡಿಸುವುದೂ ಪೊಲೀಸ್ ಸೇವೆಯ ಪ್ರಮುಖ ಭಾಗಗಳಾಗಿವೆ.

ನರೇಗಲ್ಲ ಪೊಲೀಸ್ ಠಾಣೆಯ ಕಾರ್ಯವೈಖರಿಯಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಯ ಸಮನ್ವಯ ಗಮನ ಸೆಳೆದಿದೆ. ಪಿಎಸ್‌ಐ ಐಶ್ವರ್ಯ ವಿಶ್ವನಾಥ್ ನಾಗರಾಳ ಅವರ ನೇತೃತ್ವದಲ್ಲಿ ತಂಡವಾಗಿ ಕಾರ್ಯನಿರ್ವಹಿಸಿರುವುದು ಠಾಣೆಯ ಸಾಧನೆಗೆ ಬಲ ನೀಡಿದೆ. ಇಳಕಲ್ ತಾಲೂಕಿನ ವಿಶ್ವನಾಥ ರೆಡ್ಡಿ ಅವರ ಪುತ್ರಿಯಾಗಿರುವ ಐಶ್ವರ್ಯ ನಾಗರಾಳ ಅವರು ಠಾಣೆಯ ಜವಾಬ್ದಾರಿ ನಿರ್ವಹಿಸುತ್ತಿದ್ದು, ಸಿಬ್ಬಂದಿಯ ಸಹಕಾರದೊಂದಿಗೆ ಸಾರ್ವಜನಿಕ ಸೇವೆಯಲ್ಲಿ ಉತ್ತಮ ಕಾರ್ಯಕ್ಷಮತೆ ತೋರಲು ಶ್ರಮಿಸುತ್ತಿದ್ದಾರೆ.

ಪೊಲೀಸ್ ಠಾಣೆ ಜನಸಾಮಾನ್ಯ–ರಿಗೆ ಭಯ ಹುಟ್ಟಿಸುವ ಸ್ಥಳವಾಗದೆ, ಸಂಕಷ್ಟದಲ್ಲಿರುವವರು ನ್ಯಾಯದ ನಿರೀಕ್ಷೆಯೊಂದಿಗೆ ಬರುವ ಭರವಸೆಯ ಕೇಂದ್ರವಾಗಬೇಕು. ದೂರು ನೀಡಲು ಬಂದವರ ಅಹವಾಲು ಮುಕ್ಕಳು, ಹಿರಿಯ ನಾಗರಿಕರು ಸೇ–ರಿದಂತೆ ಅಗತ್ಯವಿರುವವರಿಗೆ ನೆರವಾಗುವುದು ಹಾಗೂ ತಪ್ಪಿತಸ್ಥರ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳುವುದು ಪೊಲೀಸರ ಜವಾಬ್ದಾರಿಯಾಗಿದೆ.

ಅದೇ ರೀತಿ ಅಪರಾಧ ತಡೆಗಟ್ಟುವಲ್ಲಿ ಸಾರ್ವಜನಿಕರ ಸಹಕಾರವೂ ನಿರ್ಣಾಯಕ. ಜನರೊಂದಿಗೆ ಉತ್ತಮ ಬಾಂಧವ್ಯ ಬೆಳೆಸಿಕೊಂಡು, ಅವರ ವಿಶ್ವಾಸ ಗಳಿಸುವ ಮೂಲಕ ಕಾನೂನು ಸುವ್ಯವಸ್ಥೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಕಾಪಾಡಬಹುದು. ಪೊಲೀಸ್ ಇಲಾಖೆ ಮತ್ತು ಸಾರ್ವಜನಿಕರ ನಡುವಿನ ವಿಶ್ವಾಸ ಹೆಚ್ಚಿದಷ್ಟೂ ಸಮಾಜದಲ್ಲಿ ಶಾಂತಿ ಮತ್ತು ಸುರಕ್ಷತೆಯ ವಾತಾವರಣ ನಿರ್ಮಾಣವಾಗಲು ಸಾಧ್ಯ.

ನರೇಗಲ್ಲ ಠಾಣೆಯ ಸಾಧನೆ ಸ್ಥಳೀಯ ಜನತೆಯಲ್ಲಿ ಹೆಮ್ಮೆಯ ಭಾವನೆ ಮೂಡಿಸಿದೆ. ಠಾಣೆಯ ಅಧಿಕಾರಿ ಮತ್ತು ಸಿಬ್ಬಂದಿಯ ಪರಿಶ್ರಮಕ್ಕೆ ಹಿರಿಯ ಅಧಿಕಾ–ರಿಗಳು ಹಾಗೂ ಸಾರ್ವಜನಿಕ ವಲಯದಿಂದ ಅಭಿನಂದನೆಗಳು ವ್ಯಕ್ತವಾಗಿವೆ. ಈ ಮನ್ನಣೆ ಮುಂದಿನ ದಿನಗಳಲ್ಲಿಯೂ ಇನ್ನಷ್ಟು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಲು ತಂಡಕ್ಕೆ ಪ್ರೇರಣೆಯಾಗಲಿದೆ ಎಂಬ ನಿರೀಕ್ಷೆ ವ್ಯಕ್ತವಾಗಿದೆ.

ರಾಜ್ಯಮಟ್ಟದ ಗುರುತಿಸುವಿಕೆ ಒಂದು ಠಾಣೆಯ ಸಾಧನೆಗೆ ಸೀಮಿತವಾಗದೆ, ಜನಸ್ನೇಹಿ ಪೊಲೀಸ್ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ಪ್ರೇರಣೆಯಾಗಬೇಕು. ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸುವುದು, ಅಪರಾಧ ತಡೆಗೆ ಆದ್ಯತೆ ನೀಡುವುದು ಮತ್ತು ಕಾನೂನಿನ ಮೇಲೆ ಜನರ ವಿಶ್ವಾಸ ಹೆಚ್ಚಿಸುವುದು ಮುಂದುವ–ರಿದಾಗ ಮಾತ್ರ ಇಂತಹ ಸಾಧನೆಗೆ ನಿಜವಾದ ಅರ್ಥ ಸಿಗುತ್ತದೆ.

### ಜನರ ವಿಶ್ವಾಸವೇ ಪೊಲೀಸ್ ಸೇವೆಯ ಶಕ್ತಿ

ದೂರುಗಳಿಗೆ ತ್ವರಿತ ಸ್ಪಂದನೆ, ಅಪರಾಧ ನಿಯಂತ್ರಣ, ಕಾನೂನು ಸುವ್ಯವಸ್ಥೆ ನಿರ್ವಹಣೆ ಮತ್ತು ಸಾರ್ವಜನಿಕರೊಂದಿಗೆ ಉತ್ತಮ ಬಾಂಧವ್ಯ ಇವು ಪರಿಣಾಮಕಾರಿ ಪೊಲೀಸ್ ಕಾರ್ಯವೈಖರಿಯ ಪ್ರಮುಖ ಅಂಶಗಳು. ನರೇಗಲ್ಲ ಠಾಣೆಯ ಸಾಧನೆ ಜನಸ್ನೇಹಿ ಪೊಲೀಸ್ ಸೇವೆಗೆ ಮತ್ತಷ್ಟು ಪ್ರೇರಣೆಯಾಗಲಿ.

### ಶರಣಬಸವೇಶ್ವರ ಪುರಾಣದಲ್ಲಿ ತವರು ಮನೆಯ ಮಮತೆ, ಬಯಕೆ ಬುತ್ತಿಯ ವೈಭವ

# ಮಾದಮ್ಮ ಮಾತೆಗೆ ಸೀಮಂತದ ಸಂಭ್ರಮ



ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ತವರು ಮನೆಯ ಪ್ರೀತಿ, ಮುತ್ತೈದೆಯರ ಮಮತೆ, ಕೈರುಚಿಂ–ಯ ಸವಿ, ಸಂಪ್ರದಾಯದ ಸೊಗಡು. ಇವೆಲ್ಲವೂ ಒಂದಾಗಿ ಅರಳಿದ್ದು ಜಕ್ಕಲಿಯ ಹಾಲಕೆರೆ ಶಾಖಾ ಅನ್ನದಾನೇಶ್ವರ ಶ್ರೀಮಠದಲ್ಲಿ.

ಮಹಾದಾಸೋಹಿ ಕಲಬುರಗಿ ಶರಣಬಸವೇಶ್ವರ ಶರಣ–ರ ಪುರಾಣದ ಅಂಗವಾಗಿ ಸೋಮವಾರ ನಡೆದ ಮಾದಮ್ಮ ಮಾತೆಯ ಸೀಮಂತ ಕಾರ್ಯ ಭಕ್ತಿ, ಬಾಂಧವ್ಯ ಹಾಗೂ ಗ್ರಾಮೀಣ ಸಂಸ್ಕೃತಿಯ ಸೊಬಗಿಗೆ ಸಾಕ್ಷಿಯಾಯಿತು.

ತಿಂಗಳ ಪರ್ಯಂತ ನಡೆಯುತ್ತಿರುವ ಶರಣಬಸವೇಶ್ವರ ಪುರಾಣದಲ್ಲಿ ಅವರ ಧರ್ಮಪತ್ನಿ ಮಾದಮ್ಮ ಮಾತೆಯ ಸೀಮಂತವನ್ನು ತವರು ಮನೆಯ ಸಂಪ್ರದಾಯದಂತೆ ಸಂಭ್ರಮದಿಂದ ಆಚರಿಸಲಾಯಿತು. ಮಾದಮ್ಮ ಮಾತೆಯನ್ನು ತಮ್ಮ ಮನೆಯ ಮಗಳೆಂದೇ ಭಾವಿಸಿದ ಗ್ರಾಮದ ಮುತ್ತೈದೆಯರು ತವರು ಮನೆಯವರಾಗಿ ಪಾಲ್ಗೊಂಡು ಸೀಮಂತದ ವಿಧಿವಿಧಾನಗಳನ್ನು ನೆರವೇರಿಸಿದರು.

ಶ್ರೀಮಠದ ವೇದಿಕೆಯಲ್ಲಿ ವಿಶೇಷವಾಗಿ ಅಲಂಕ–ರಿಸಿದ್ದ ಶರಣಬಸವೇಶ್ವರ ಹಾಗೂ ಮಾದಮ್ಮ ಮಾತೆಯ ಮೂರ್ತಿಗಳಿಗೆ ಪೂಜೆ ಸಲ್ಲಿಸಿ, ಆರತಿ ಬೆಳಗಿ ಶುಭ ಹಾರೈಸಲಾಯಿತು.

ಶ್ರೀ ವೀರಭದ್ರೇಶ್ವರ ದೇವಸ್ಥಾನ ಹಾಗೂ ಮಹಾಂತೇಶ್ವರ ಮಠದ ಸದ್ಭಕ್ತ ಮಹಿಳೆಯರಾದ ವಿಜಯಲಕ್ಷ್ಮೀ ಕಡಗದ, ಹೇಮಕ್ಕ ಮೇಟಿ, ರತ್ನಮ್ಮ ಬೂದಿಹಾಳ, ಲಕ್ಷ್ಮವ್ವ ನಾಲವಾಡದ, ನೀಲಮ್ಮ ಕುರುಡಗಿ, ರಾಜೇಶ್ವರಿ ನಾಲವಾಡದ, ರೇಖಾ ಬಸವರಾಜ ಆದಿ ಹಾಗೂ ಮೀನಾಕ್ಷಿ ಪಲ್ಲೇದ ಅವರ ನೇತೃತ್ವದಲ್ಲಿ ಸೀಮಂತದ ಸಂಪ್ರದಾಯಗಳು ಜರುಗಿದವು.

ಹೂಗಳಿಂದ ಮಾದಮ್ಮ ಮಾತೆಯನ್ನು ಅಲಂಕರಿಸಿ, ಹಸಿರು ಬಳೆ, ಅರಿಶಿನ, ಕುಂಕುಮ, ಹೂವಿನ ದಂಡೆ, ಸೀರೆ ಹಾಗೂ ಖಣವನ್ನು ಅರ್ಪಿಸಿ ಉಡಿ ತುಂಬಲಾಯಿತು. ಶರಣಬಸವೇಶ್ವರರಿಗೆ ಚಿನ್ನದ ಸರ, ಉಂಗುರ ಹಾಗೂ ಬಟ್ಟೆಗಳನ್ನು ಸಮರ್ಪಿಸುವ ಮೂಲಕ ಗಂಡಿನ ಕಡೆಯ ಸಂಪ್ರದಾಯವನ್ನೂ ಗೌರವಿಸಲಾಯಿತು.

ಸೀಮಂತದ ಪ್ರಮುಖ ಆಕರ್ಷಣೆಯಾಗಿದ್ದು ಬಯಕೆ ಬುತ್ತಿ. ಮಾದಮ್ಮ ಮಾತೆಯ ತವರು ಮನೆಯವರಾಗಿ ಸದ್ಭಕ್ತ ಮಹಿಳೆಯರು ಎರಡು ದಿನಗಳ ಮುಂಚಿತವಾಗಿಯೇ ವಿವಿಧ ಬಗೆಯ ಸಿಹಿ–ಖಾರದ ಖಾದ್ಯಗಳನ್ನು ಪ್ರೀತಿಯಿಂದ ಸಿದ್ಧಪಡಿಸಿದ್ದರು. ಕರಚಿಕಾಯಿ, ಸುರಳಿ ಹೋಳಿಗೆ, ಎಣ್ಣೆ ಹೋಳಿಗೆ, ಗಾರಿಗೆ, ಚಕ್ಕುಲಿ, ಜಿಲೇಬಿ ಸೇ–ರಿದಂತೆ ಸಾಂಪ್ರದಾಯಿಕ ತಿಂಡಿಗಳ ಜೊತೆಗೆ ಬದನೆಕಾಯಿ ಪಲ್ಯ, ಹೆಸರುಕಾಳು–ಕಡಲೆಕಾಳಿನ ಮಿಶ್ರ ಪಲ್ಯ, ಕೆಂಪು ಚಟ್ನಿ, ಕಡಕ ಜೋಳದ ರೊಟ್ಟಿ, ಚಪಾತಿ ಹಾಗೂ ಮೊಸರನ್ನವನ್ನು ತಯಾರಿಸಲಾಗಿ–ತ್ತು.

ತವರು ಮನೆಯವರು ಮಗಳಿಗಾಗಿ ಪ್ರೀತಿಯಿಂದ ಸಿದ್ಧಪಡಿಸುವ ಖಾದ್ಯಗಳು ಬರೀ ತಿನಿಸುಗಳಲ್ಲ. ಅವು ಕಾಳಜಿ, ಆತ್ಮೀಯತೆ ಹಾಗೂ ಕೌಟುಂಬಿಕ ಬಾಂಧವ್ಯದ ಸಂಕೇತಗಳು. ಪ್ರತಿಯೊಂದು ಖಾದ್ಯದಲ್ಲೂ ಮಹಿಳೆಯರ ಶ್ರಮ, ಕೈರುಚಿ ಹಾಗೂ ತಲೆಮಾರುಗಳಿಂದ ಹರಿದುಬಂದ ಸಂಪ್ರದಾಯದ ಸವಿಯಿತ್ತು.

ವಿವಿಧ ಪಾತ್ರೆಗಳಲ್ಲಿ ಖಾದ್ಯಗಳನ್ನು ಅಚ್ಚುಕಟ್ಟಾಗಿ ಜೋಡಿಸಿ, ಬುತ್ತಿ ಗಂಟುಗಳನ್ನು ಹೊತ್ತು ಮಹಿಳೆಯರು ಗ್ರಾಮದ ಪ್ರಮುಖ ಬೀದಿಗಳ ಮೂಲಕ ಶ್ರೀಮಠಕ್ಕೆ ಮೆರವಣಿಗೆಯಲ್ಲಿ ಆಗಮಿಸಿದರು. ಮಂಗಳವಾದ್ಯಗಳ ನಾದ, ಸಾಂಪ್ರದಾಯಿಕ ಹಾಡುಗಳು ಹಾಗೂ ಮಹಿಳೆಯರ ಸಂಭ್ರಮ ಮೆರವಣಿಗೆಗೆ ವಿಶೇಷ ಮೆರುಗು ನೀಡಿದವು. ತವರು ಮನೆಯವರು ಮಗಳಿಗಾಗಿ ಬಯಕೆ ಬುತ್ತಿ ಹೊತ್ತು ತರುವ ಸಂಪ್ರದಾಯವನ್ನು ಈ ಆಚರಣೆ ಮತ್ತೊಮ್ಮೆ ನೆನಪಿಸಿತು.

ಶ್ರೀ ಕಲ್ಮೇಶ್ವರ ಹಾಗೂ ಶ್ರೀ ಬಸವೇಶ್ವರ ದೇವಸ್ಥಾನಗಳ ಸದ್ಭಕ್ತರು ಗಂಡಿನ ಕಡೆಯವರಾಗಿ ಪಾಲ್ಗೊಂಡರು. ಶರಣಮ್ಮ ಗಾಣಿಗೇರ, ಶರಣಮ್ಮ ನಾಲವಾಡ ಹಾಗೂ ಸಂಗಡಿಗರು ಸಾಂಪ್ರದಾಯಿಕ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡಿ ಕಾರ್ಯಕ್ರಮದ ಸಂಭ್ರಮ ಹೆಚ್ಚಿಸಿದರು.

ಈ ಸಂದರ್ಭದಲ್ಲಿ ಗದುಗಿನ ವೀರೇಶ್ವರ ಪುಣ್ಯಾಶ್ರಮದ ಪ್ರವಚನ ಪ್ರವೀಣ ಪಂ. ವೇ.ಮೂ. ಎಂ.ಜಿ. ಗುರುಸಿದ್ದೇಶ್ವರ ಶಾಸ್ತ್ರಿಗಳು ಸ್ಟೀಲ್ ತಂಬಿಗೆ, ಕಾಲುಂಗುರ, ಬಿತ್ತನೆ ಕೂರಿಗೆ ಹಾಗೂ ಕೃಷಿ ಚಟುವಟಿ–ಕೆಯಲ್ಲಿ ಬಳಸುವ ಕುಂಟೆ ಸೇ–ರಿದಂತೆ ವಿವಿಧ ವಸ್ತುಗಳ ಹರಾಜು ನಡೆಸಿದರು. ಭಕ್ತರು ಉತ್ಸಾಹದಿಂದ ಪಾಲ್ಗೊಂಡರು. ಭಗತ್ ಸಿಂಗ್ ಅಭಿಮಾನಿ ಬಳಗದವರಿಂದ ಹೋಳಿಗೆ ಹಾಗೂ ಅನ್ನಸಂತರ್ಪಣೆ ನಡೆಯಿತು. ಭಕ್ತರಿಗೆ ಬಯಕೆ ಬುತ್ತಿಯ ವಿವಿಧ ಖಾದ್ಯಗಳ ಪ್ರಸಾದ ವಿತರಿಸಲಾಯಿತು.

ಇಂದಿನ ವೇಗದ ಬದುಕಿನಲ್ಲಿ ಮರೆಯಾಗುತ್ತಿರುವ ಗ್ರಾಮೀಣ ಸಂಪ್ರದಾಯಗಳನ್ನು ಪುರಾಣದ ಸನ್ನಿವೇಶದ ಮೂಲಕ ಮರುಕಳಿಸಿದ ಈ ಆಚರಣೆ ಗಮನ ಸೆಳೆಯಿತು. ತವರು ಮನೆಯ ಮಮತೆ, ಮಹಿಳೆಯರ ಒಗ್ಗಟ್ಟು, ಸಾಂಪ್ರದಾಯಿಕ ಕೈರುಚಿ ಹಾಗೂ ಸಾಮೂಹಿಕ ಭಕ್ತಿಯ ಸಮ್ಮಿಲನಕ್ಕೆ ಕಾರ್ಯಕ್ರಮ ಸಾಕ್ಷಿಯಾಯಿತು.

ಮಾದಮ್ಮ ಮಾತೆಯ ಸೀಮಂತವು ಕೇವಲ ಧಾರ್ಮಿಕ ವಿಧಿವಿಧಾನವಾಗಿ ಉಳಿಯದೆ, ಹೆಣ್ಣಿನ ಬದುಕಿನ ಮಹತ್ವದ ಘಟ್ಟಕ್ಕೆ ಸಲ್ಲಿಸಿದ ಗೌರವ ಹಾಗೂ ಕೌಟುಂಬಿಕ ಬಾಂಧವ್ಯದ ಪ್ರತೀಕವಾಗಿ ಮೂಡಿಬಂತು. ಪುರಾಣವನ್ನು ಆಲಿಸುವುದರ ಜೊತೆಗೆ ಅದರ ಸನ್ನಿವೇಶವನ್ನು ಸಂಪ್ರದಾಯದ ಮೂಲಕ ಅನುಭವಿಸುವ ಅವಕಾಶ ಭಕ್ತರಿಗೆ ದೊರೆಯಿತು.

ಭಕ್ತಿ, ಬಾಂಧವ್ಯ ಮತ್ತು ಸಂಪ್ರದಾಯ ಒಂದಾಗಿ ಬೆರೆತ ಜಕ್ಕಲಿಯ ಹಾಲಕೆರೆ ಶಾಖಾ ಅನ್ನದಾನೇಶ್ವರ ಶ್ರೀಮಠದ ಸೀಮಂತ ಸಂಭ್ರಮವು ಗ್ರಾಮೀಣ ಸಂಸ್ಕೃತಿಯ ಶ್ರೀಮಂತಿಕೆಯನ್ನು ಮತ್ತೊಮ್ಮೆ ಅನಾವರಣಗೊಳಿಸಿತು.

### ಬಯಕೆ ಬುತ್ತಿಯಲ್ಲಿ ತವರು ಮನೆಯ ಮಮತೆಯ ರುಚಿ

ತವರು ಮನೆಯವರು ಮಗಳಿಗಾಗಿ ಪ್ರೀತಿಯಿಂದ ಸಿದ್ಧಪಡಿಸುವ ಕರಚಿಕಾಯಿ, ಸುರಳಿ ಹೋಳಿಗೆ, ಎಣ್ಣೆ ಹೋಳಿಗೆ, ಗಾರಿಗೆ, ಚಕ್ಕುಲಿ, ಜಿಲೇಬಿ ಸೇರಿದಂತೆ ವಿವಿಧ ಸಿಹಿ-ಖಾರದ ಖಾದ್ಯಗಳು ಬಯಕೆ ಬುತ್ತಿಯ ಮೆರುಗು ಹೆಚ್ಚಿಸಿದವು. ಕಡಕ ಜೋಳದ ರೊಟ್ಟಿ, ಪಲ್ಯ, ಚಟ್ನಿ, ಚಪಾತಿ ಹಾಗೂ ಮೊಸರನ್ನವೂ ಬುತ್ತಿಯಲ್ಲಿ ಸ್ಥಾನ ಪಡೆದಿದ್ದವು. ಮಹಿಳೆಯರ ಕೈರುಚಿ, ತವರು ಮನೆಯ ಮಮತೆ ಹಾಗೂ ಗ್ರಾಮೀಣ ಸಂಪ್ರದಾಯದ ಸೊಗಡು ಈ ಬಯಕೆ ಬುತ್ತಿಯಲ್ಲಿ ಅನಾವರಣಗೊಂಡಿತು.

## ಬೆಟಗೇರಿ ದಸರಾ ಉತ್ಸವದಲ್ಲಿ ಇಂದು ಡ್ಯಾನ್ಸ್ ಧಮಾಕಾ, ನೃತ್ಯ ಸಿರಿ



ವಿಜಯಸಾಕ್ಷಿ ಸುದ್ದಿ, ಬೆಟಗೇರಿ

ಎಸ್.ಎಸ್.ಕೆ. ಸಮಾಜ ಬೆಟಗೇರಿ ಹಾಗೂ ಎಸ್.ಎಸ್.ಕೆ. ದಸರಾ ಉತ್ಸವ ಸಮಿತಿ ವತಿಯಿಂದ ಇಂದು ಸಂಜೆ 7 ಗಂಟೆಗೆ ಡ್ಯಾನ್ಸ್ ಹಾಗೂ ವಿಶೇಷ ನೃತ್ಯ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಗದಗದ ಚೈತನ್ಯ ಡ್ಯಾನ್ಸ್ ಅಕಾಡೆಮಿಯಿಂದ ಸಂಜೆ 7 ಗಂಟೆಗೆ ಡ್ಯಾನ್ಸ್ ಡ್ಯಾನ್ಸ್ ಕಾರ್ಯಕ್ರಮ ನಡೆಯಲಿದ್ದು, ರಾತ್ರಿ 8 ಗಂಟೆಗೆ ಬೆಟಗೇರಿಯ ನೃತ್ಯ ಸಿರಿ ಡ್ಯಾನ್ಸ್ ಅಕಾಡೆಮಿಯ ಶ್ರೀಮತಿ ರಶ್ಮಿ ಅರಸಿದ್ಧಿ ಹಾಗೂ ನಂದಿನಿ ರೋಣದ ಅವರಿಂದ ವಿಶೇಷ ನೃತ್ಯ ಪ್ರದರ್ಶನ ಜರುಗಲಿದೆ.

ದಸರಾ ಉತ್ಸವ ಸಮಿತಿಯ ಲೆಕ್ಕಪರಿಶೋಧಕ ನರಸಿಂಗಸಾ ವೈ. ಮೇರವಾಡೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಗದಗದ ವೈದ್ಯರಾದ ಡಾ. ಶಶಾಂಕ ಜೆ. ಶಿರೋಳ, ಡಾ. ಸ್ನೇಹಾ ಪಾಟೀಲ ಶಶಾಂಕ ಶಿರೋಳ, ಡಾ. ಚನ್ನವೀರ ಎಂ. ನಾಲ್ವಾಡ, ಡಾ. ಅಂಜಲಿ ಚ. ನಾಲ್ವಾಡ ಹಾಗೂ ಗಜೇಂದ್ರಗಡದ ವೈದ್ಯರಾದ ಡಾ. ಪ್ರವೀಣ ಕೆ. ಚವಡಿಮನಿ ಭಾಗವಹಿಸಲಿದ್ದಾರೆ.

ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಬೇಕೆಂದು ಎಸ್.ಎಸ್.ಕೆ. ದಸರಾ ಉತ್ಸವ ಸಮಿತಿ ಮನವಿ ಮಾಡಿದೆ.

## ಬಸವಣ್ಣನವರಲ್ಲಿ ವಿಶ್ವದ ವಿಭೂತಿ ಪುರುಷರ ದರ್ಶನ




ವಿಜಯಸಾಕ್ಷಿ ಸುದ್ದಿ, ಗದಗ

ಬಸವಣ್ಣನವರು ಕೇವಲ ಕರ್ನಾಟಕ ಅಥವಾ ಭಾರತದ ಬೆಳಕಲ್ಲ, ಇಡೀ ಜಗತ್ತಿನ ಬೆಳಕು. ಕಾಯಕ, ದಾಸೋಹ, ಸಮಾನತೆ ಹಾಗೂ ಅನುಭಾವದ ಮೂಲಕ ಸಮಾಜಕ್ಕೆ ಹೊಸ ದಿಕ್ಕು ತೋ–ರಿದ ವಿಶ್ವಗುರು ಬಸವಣ್ಣನವರಲ್ಲಿ ವಿಶ್ವದ ಎಲ್ಲ ವಿಭೂತಿ ಪುರುಷರ ಆದರ್ಶಗಳನ್ನು ಕಾಣಬಹುದು ಎಂದು ಪ್ರೊ. ಎಸ್.ಯು. ಸಜ್ಜನಶೆಟ್ಟರ ಹೇಳಿದರು.

ನಗರದ ಶಿವಾನಂದನಗರದ ಬಸವದಳದ ಬಸವ ಸಮುದಾಯ ಭವನದಲ್ಲಿ ನಡೆದ 1719ನೇ ಶರಣ ಸಂಗಮ ಕಾರ್ಯಕ್ರಮದಲ್ಲಿ 'ಕನ್ನಡಿಗರ ಸಾಂಸ್ಕೃತಿಕ ನಾಯಕ, ವಿಶ್ವಗುರು ಬಸವಣ್ಣನವರು' ವಿಷಯದ ಕುರಿತು ಅವರು ಉಪನ್ಯಾಸ ನೀಡಿದರು.

ಬಸವಣ್ಣನವರು ಶರಣ ಸಂಸ್ಕೃತಿ, ಕಾಯಕ–ದಾಸೋಹ ಹಾಗೂ ಅರಿವು–ಆಚಾರ–ಅನುಭಾವದ ಮೌಲ್ಯಗಳನ್ನು ಸಮಾಜದಲ್ಲಿ ಬೆಳೆಸಿದರು. 'ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ' ಎಂಬ ವಚನದ ಮೂಲಕ ನೈತಿಕ ಬದುಕಿನ ಮಹತ್ವ ಸಾರಿದರು. ಎಲ್ಲರನ್ನೂ ಸಮಾನವಾಗಿ ಕಾಣುವ, ಪ್ರೀತಿ, ವಿನಯ ಮತ್ತು ಗೌರವದಿಂದ ಬದುಕುವ ಮಾರ್ಗವನ್ನು ತೋ–ರಿದರು ಎಂದು ವಿವರಿಸಿದರು.

ಅತಿಥಿ ಡಾ. ರಾಜಶೇಖರ ದಾನರೆಡ್ಡಿ ಅವರು ಬಸವಕಲ್ಯಾಣದಲ್ಲಿ ನಡೆದ 'ಶಿವಾನುಭವ ಪತ್ರಿಕೆ' ಶತಮಾನೋತ್ಸವ ವಿಚಾರ ಸಂಕಿರಣದ ಅನುಭವಗಳನ್ನು ಹಂಚಿಕೊಂಡರು.

ಬಸವಕಲ್ಯಾಣದ ಶರಣರ ನೆಲೆಗಳು, ಐತಿಹಾಸಿಕ ತಾಣಗಳು ಹಾಗೂ ವಚನ ಪರಂಪರೆಯ ಮಹತ್ವವನ್ನು ವಿವರಿಸಿದರು.

ಹಿರಿಯ ಶರಣ ಎಸ್.ಎ. ಮುಗದ ಮಾತನಾಡಿ, ಶರಣ–ರ ವಿಚಾರಗಳನ್ನು ಜನರಿಗೆ ತಲುಪಿಸಲು ವಚನ ಚಿಂತನೆ, ಗಾಯನ ಹಾಗೂ ಉಪನ್ಯಾಸಗಳಲ್ಲಿ ಎಲ್ಲರೂ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದರು.

## ಅನಾರೋಗ್ಯದಿಂದ ಬಳಲುತ್ತಿದ್ದ ಚಿರತೆ ಚಿಕಿತ್ಸೆ ಫಲಿಸದೆ ಸಾವು



ವಿಜಯಸಾಕ್ಷಿ ಸುದ್ದಿ, ಡಂಬಳ

ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಡಂಬಳ ಹೋಬಳಿಯ ಸಿಂಗಟರಾಯನಕೆರೆ ತಾಂಡಾದ ರೈತ ಹನುಮಂತ ಪಾಂಡಪ್ಪ ಪವಾರ ಅವರ ಹೊಲದಲ್ಲಿ ಪತ್ತೆಯಾಗಿದ್ದ ಚಿರತೆ, ಗಂಭೀರ ಅನಾರೋಗ್ಯದಿಂದ ಚಿಕಿತ್ಸೆ ಫಲಕಾರಿಯಾಗದೆ ಮಂಗಳವಾರ ಮೃತಪಟ್ಟಿದೆ.

ರೈತರ ಹೊಲದಲ್ಲಿನ ಕೃಷಿಹೊಂಡದ ಪೈಪ್‌ನಲ್ಲಿ ಚಿರತೆ ಕುಳಿತಿರುವುದನ್ನು ಕಂಡು ಅರಣ್ಯ ಇಲಾಖೆಗೆ ಮಾಹಿತಿ ನೀಡಲಾಗಿ–ತ್ತು. ತಕ್ಷಣ ಸ್ಥಳಕ್ಕೆ ಧಾವಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಚಿರತೆಯನ್ನು ಸುರಕ್ಷಿತವಾಗಿ ಸೆರೆಹಿಡಿದರು. ಚಿರತೆ ತೀವ್ರ ಅನಾರೋಗ್ಯದಿಂದ ಬಳಲುತ್ತಿರುವುದು ಕಂಡುಬಂದ ಹಿನ್ನೆಲೆಯಲ್ಲಿ ಹೆಚ್ಚಿನ ಚಿಕಿತ್ಸೆಗಾಗಿ ಗದಗ ಪ್ರಾಣಿ ಸಂಗ್ರಹಾಲಯದ ಚಿಕಿತ್ಸಾ ಕೇಂದ್ರಕ್ಕೆ ಸ್ಥಳಾಂತ–ರಿಸಲಾಯಿತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಚಿರತೆ ಮೃತಪಟ್ಟಿದೆ.

ಸ್ಥಳಕ್ಕೆ ಡಿಎಫ್‌ಒ ಸಂತೋಷಕುಮಾರ ಕೆಂಚಪ್ಪನವರ, ಎಸಿಎಫ್ ಮಾಂತೇಶ ಪೋಲಿಸ್ ಪಾಟೀಲ, ಆರ್‌ಎಫ್‌ಒ ಮಂಜುನಾಥ ಮೇಗಲಮನಿ, ಪಶುವೈದ್ಯೆ ಪವಿತ್ರಾ ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ಭೇಟಿ ನೀಡಿದ್ದರು.

ಚಿರತೆ ಇರುವ ಬಗ್ಗೆ ಮಾಹಿತಿ ಬಂದ ತಕ್ಷಣ ಸ್ಥಳಕ್ಕೆ ತೆರಳಿ ಸುರಕ್ಷಿತವಾಗಿ ಸೆರೆಹಿಡಿಯಲಾಯಿತು. ಅನಾರೋಗ್ಯದಿಂದ ಬಳಲುತ್ತಿದ್ದ ಚಿರತೆಗೆ ತಕ್ಷಣ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಗದಗ ಪ್ರಾಣಿ ಸಂಗ್ರಹಾಲಯಕ್ಕೆ ಕರೆದೊಯ್ಯಲಾಗಿತ್ತು.

– ಸಂತೋಷಕುಮಾರ ಕೆಂಚಪ್ಪನವರ, ಡಿಎಫ್‌ಒ



**ಗದಗ:** ನವರಾತ್ರಿ ಹಬ್ಬದ ಸಂಭ್ರಮದಲ್ಲಿ ಗದಗ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಿಬ್ಬಂದಿಗಳಾದ ಜ್ಯೋತಿ, ಅಶ್ವಿನಿ, ಉಮಾ, ಸಾಧನಾ, ಗಾಯತ್ರಿ, ಗೀತಾ ಹಾಗೂ ಶಿಲ್ಪಾ ಅವರು ಸಂಭ್ರಮದಿಂದ ಪಾಲ್ಗೊಂಡರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka
Printed at : Sai Printing Press, Near Joda Maruti Temple, Gadag-582101, Dist : Gadag- Karnataka